ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್: 0821-3419363/24193011

e-mail registrar@Uni-mysore-ac-in
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ಸಂಖ್ಯೆ: ಯುಎ-3/255/2023-2024
ಅಡಕ: ನಡವಳಿಗಳು(1-22)

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ದಿನಾಂಕ 14-02-2024

**"ಪ್ರಮಾಣಿತ ಅಂಚೆ ಮೂಲಕ"**

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 31-01-2024ರಂದು ನಡೆದ ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಯ ನಡವಳಿಯನ್ನು ಕಳುಹಿಸುವ ಬಗ್ಗೆ.

* * * * *

ದಿನಾಂಕ:31-01-2024ರಂದು ಬೆಳಗ್ಗೆ 11-30 ಗಂಟೆಗೆ, ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನ, ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಯ ನಡವಳಿಗಳನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಅಳವಡಿಸಿದೆ. ನಡವಳಿಯಲ್ಲಿ ದಾಖಲಿಸಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು-570005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ. ಸದರಿ ನಡವಳಿಗಳಿಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ದಾಖಲಿಸಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ.

ತಮ್ಮ ನಂಬುಗೆಯ

Lingaraju 14/02/24

ಉಪ ಕುಲಸಚಿವ(ಪ್ರಾಧಿಕಾರ)
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು.

ಪ್ರತಿ:

1. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಸಂಯೋಜಕರು, (ICD) ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು - ಶಿಕ್ಷಣ ಮಂಡಳಿ ಸಭೆಯ ನಡವಳಿಯನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಅಳವಡಿಸಲು ಕ್ರಮವಹಿಸುವುದು.
8. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಕಛೇರಿ ಪ್ರತಿ.

AC Forwarding letter

# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಶೈಕ್ಷಣಿಕ ಮಂಡಳ ಸಭಾಂಗಣದಲ್ಲಿ ದಿನಾಂಕ: 31-01-2024 ರಂದು ಪೂರ್ವಾಹ್ನ 11.30 ಗಂಟೆಗೆ ನಡೆದ ವಿದ್ಯಾವಿಷಯಕ ಪರಿಷತ್ ಎರಡನೇ ಸಾಮಾನ್ಯ ಸಭೆಯ ನಡವಳಿಗಳು.

**<u>ಸಭೆಯಲ್ಲಿ ಹಾಜರಾಗಿದ್ದ ಸದಸ್ಯರುಗಳು</u>**

1. ಪ್ರೊ. ಎನ್.ಕೆ.ಲೋಕನಾಥ್, ಕುಲಪತಿಗಳು – ಅಧ್ಯಕ್ಷರು
2. ಡಾ. ಜಯಶಂಕರ್.ಎನ್ – ಸದಸ್ಯರು
3. ಶ್ರೀಮತಿ ಸೌಮ್ಯ ಈರಪ್ಪ.ಕೆ – ಸದಸ್ಯರು
4. ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ – ಸದಸ್ಯರು
5. ಡಾ. ಮುಜೀದ ಬಾನು – ಸದಸ್ಯರು
6. ಡಾ.ಅಂತೋನಿ ಪಾಲ್ ರಾಜ್.ಸಿ – ಸದಸ್ಯರು
7. ಡಾ. ಪ್ರಿಯಾ ಸಿ.ಜೆ. – ಸದಸ್ಯರು
8. ಶ್ರೀಮತಿ ಕೆ.ಎಂ. ಪದ್ಮಾವತಿ – ಸದಸ್ಯರು
9. ಪ್ರೊ. ಟಿ.ಆರ್. ಮಾರುತಿ – ಸದಸ್ಯರು
10. ಪ್ರೊ. ಎಸ್. ಮದಿಅಳಗನ್ – ಸದಸ್ಯರು
11. ಪ್ರೊ. ಬಿ. ಮಹಾದೇವಪ್ಪ – ಸದಸ್ಯರು
12. ಪ್ರೊ. ಎಂ.ಎ.ಶ್ರೀಧರ್ – ಸದಸ್ಯರು
13. ಪ್ರೊ. ಆಯಿಷಾ ಎಂ. ಶರೀಫ್, – ಸದಸ್ಯರು
14. ಪ್ರೊ.ಡಿ.ಸೋನರ್ ನಂದಪ್ಪ – ಸದಸ್ಯರು
15. ಪ್ರೊ. ಎಂ.ಜಿ. ಮಂಜುನಾಥ – ಸದಸ್ಯರು
16. ಪ್ರೊ. ನಾಗರಾಜ ನಾಯ್ಕ್ – ಸದಸ್ಯರು
17. ಪ್ರೊ. ಕೆ. ಸದಾಶಿವ – ಸದಸ್ಯರು
18. ಪ್ರೊ. ಡಿ.ಆನಂದ್
    ನಿರ್ದೇಶಕರು (ಪ್ರಭಾರ) ಕಾಲೇಜು ಅಭಿವೃದ್ಧಿ ಮಂಡಳ – ಸದಸ್ಯರು
19. ಡಾ. ಪಿ. ಸರಸ್ವತಿ, ಗ್ರಂಥಪಾಲಕರು – ಸದಸ್ಯರು
    ಮಾನಸಗಂಗೋತ್ರಿ, ಮೈಸೂರು
20. ಡಾ.ಚಂದ್ರಶೇಖರ್, ನಿರ್ದೇಶಕರು (ಪ್ರಭಾರ) – ಸದಸ್ಯರು
    ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ
21. ಡಾ. ವೆಂಕಟೇಶ್, ನಿರ್ದೇಶಕರು (ಪ್ರಭಾರ), ದೈಹಿಕ ಶಿಕ್ಷಣ – ಸದಸ್ಯರು
22. ಪ್ರೊ. ಕೆ.ಎಂ. ಮಹಾದೇವನ್,ಕುಲಸಚಿವ (ಪರೀಕ್ಷಾಂಗ) – ಸದಸ್ಯರು
23. ಶ್ರೀಮತಿ ರೇಖಾ ಕೆ.ಎಸ್., ಕೆ.ಎಸ್.ಎ.ಎಸ್, ಹಣಕಾಸು ಅಧಿಕಾರಿ – ಸದಸ್ಯರು
24. ಕುಮಾರಿ ಅನುಷಾ.ಪಿ.ಜಿ – ಸದಸ್ಯರು
25. ಶ್ರೀ ಉದಯ್.ಎಂ.ಎಲ್ – ಸದಸ್ಯರು
26. ಶ್ರೀಮತಿ ವಿ.ಆರ್. ಶೈಲಜ, ಕೆ..ಎ.ಎಸ್,. **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ**

**<u>ಸಭೆಯಲ್ಲಿ ಗೈರು ಹಾಜರಾಗಿದ್ದವರು</u>**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ. ಇವರ ಪರವಾಗಿ ಪ್ರೊ. ಎ.ಚ್. ವಿಜಯಲಕ್ಷ್ಮಿ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
3. ಶ್ರೀ ಸಿ.ಎನ್. ಮಂಜೇಗೌಡ ಎಂ.ಎಲ್.ಸಿ
4. ಶ್ರೀ ಎಂ.ಪಿ. ಕುಶಾಲಪ್ಪ, ಎಂ.ಎಲ್.ಸಿ

5. ಶ್ರೀ ಎಸ್.ಹೆಚ್. ಗಂಗೇಗೌಡ
6. ಡಾ.ಗಣೇಶ.ಕೆ
7. ಪ್ರೊ. ಎನ್. ನಾಗರಾಜ, ನಿರ್ದೇಶಕರು, ಪಿ.ಎಂ.ಇ.ಬಿ
8. ಶ್ರೀ ಎಂ. ಪವನ್ ಕುಮಾರ್

ಮಾನ್ಯ ಕುಲಪತಿಗಳು ಮಾತನಾಡಿ ಶಿಕ್ಷಣ ಮಂಡಳ ಎರಡನೇ ಸಾಮಾನ್ಯ ಸಭೆಗೆ ಹಾಜರಾಗಿರುವ ಎಲ್ಲಾ ಸದಸ್ಯರುಗಳನ್ನು ಹಾಗೂ ಪತ್ರಿಕಾ ಮಾಧ್ಯಮದವರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

**ನಂತರ ಕುಲಸಚಿವರು** ಶಿಕ್ಷಣ ಮಂಡಳ ಎರಡನೇ ಸಾಮಾನ್ಯ ಸಭೆಗೆ ಆಗಮಿಸಿರುವ ಎಲ್ಲಾ ಸದಸ್ಯರು ಮತ್ತು ಪತ್ರಿಕಾ ಮಾಧ್ಯಮದವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಹಾಗೂ ಕುಲಸಚಿವರು ಮಾನ್ಯ ಕುಲಪತಿಯವರ ಅನುಮತಿಯ ಮೇರೆಗೆ ಸಭೆಯಲ್ಲಿ ಕಾರ್ಯಸೂಚಿಯನ್ನು ಮಂಡಿಸಿದರು.

<u>ವಿಷಯ ಸಂಖ್ಯೆ:I.1</u>

ದಿನಾಂಕ:10–11–2023ರಂದು ಜರುಗಿದ ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.

<table>
<tr><td>ವಿಷಯ ಸಂಖ್ಯೆ: III.1</td><td colspan="2">Specialized ಕೋರ್ಸ್‌ಗಳ ಅಧ್ಯಯನ ಮಂಡಳಿಯ ಶಿಫಾರಸ್ಸುಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕೋರುವ ಬಗ್ಗೆ.</td></tr>
<tr><td>ತೀರ್ಮಾನ</td><td>ಪ್ರಸ್ತುತ ನಡವಳಿಯಲ್ಲಿ ದಾಖಲಿಸಿರುವುದು</td><td>ತಿದ್ದುಪಡಿ ಮಾಡಬೇಕಾಗಿರುವುದು</td></tr>
<tr><td></td><td>Specialized Programme ಅಡಿಯಲ್ಲಿ ಮರಿಯನ್ ಇನ್ಸ್ಟಿಟ್ಯೂಟ್ ಆಫ್ ಪ್ರೊಫೆಷನಲ್ ಸ್ಟಡೀಸ್, ಎಂ.ಐ.ಟಿ ಕ್ಯಾಂಪಸ್, ಕೆ.ಆರ್. ಮಿಲ್, ಬೆಳವಾಡಿ ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ ಸಂಸ್ಥೆಯ 1. BBA-Hons. (Hospital Administration) and 2. Master of Hospital Administration ಕೋರ್ಸ್‌ಗಳಿಗೆ ಸಂಬಂಧಿಸಿದ ಅಧ್ಯಯನ ಮಂಡಳಿಯು ಸಲ್ಲಿಸಿರುವ ಶಿಪಾರಸ್ಸುಗಳಂತೆ ಸಿದ್ದಪಡಿಸಲಾಗಿರುವ ರೆಗ್ಯುಲೇಷನ್ಸ್, ಪಠ್ಯಕ್ರಮ ಮತ್ತು Scheme of Examinationಗಳನ್ನು <u>ಶಿಕ್ಷಣ ನಿಕಾಯ</u> ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.</td><td>Specialized Programme ಅಡಿಯಲ್ಲಿ ಮರಿಯನ್ ಇನ್ಸ್ಟಿಟ್ಯೂಟ್ ಆಫ್ ಪ್ರೊಫೆಷನಲ್ ಸ್ಟಡೀಸ್, ಎಂ.ಐ.ಟಿ ಕ್ಯಾಂಪಸ್, ಕೆ.ಆರ್. ಮಿಲ್, ಬೆಳವಾಡಿ ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ ಸಂಸ್ಥೆಯ 1. BBA-Hons. (Hospital Administration) and 2. Master of Hospital Administration ಕೋರ್ಸ್‌ಗಳಿಗೆ ಸಂಬಂಧಿಸಿದ ಅಧ್ಯಯನ ಮಂಡಳಿಯು ಸಲ್ಲಿಸಿರುವ ಶಿಪಾರಸ್ಸುಗಳಂತೆ ಸಿದ್ದಪಡಿಸಲಾಗಿರುವ ರೆಗ್ಯುಲೇಷನ್ಸ್, ಪಠ್ಯಕ್ರಮ ಮತ್ತು Scheme of Examination ಗಳನ್ನು <u>ವಾಣಿಜ್ಯ ನಿಕಾಯ</u> ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.</td></tr>
<tr><td>ತೀರ್ಮಾನ</td><td colspan="2">ದಿನಾಂಕ: 10–11–2023 ರಂದು ಜರುಗಿದ ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಯ ನಡವಳಿಯನ್ನು ಮೇಲಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.</td></tr>
<tr><td>II.1</td><td colspan="2">ವಿಶ್ವವಿದ್ಯಾನಿಲಯದಲ್ಲಿ "ಲೇಟ್ ಅಮರಾವತಿ ಮತ್ತು ಲೇಟ್ ಕೃಷ್ಣಾಚಾರಿ ನಗದು ಬಹುಮಾನ", ಪ್ರೊ ಮಲ್ಲಿನಾಥ ಕುಂಬಾರರ ಅಭಿನಂದನಾ ನಗದು ಬಹುಮಾನ" ಮತ್ತು "ಪ್ರೊ. ಬಿ.ಎಸ್. ಕಿರಣಗಿ ಚಿನ್ನದ ಪದಕ" ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ.</td></tr>
</table>

| ಕ್ರ. ಸಂ | ದಾನಿಗಳು ಕೋರಿರುವ ದತ್ತಿಯ ಹೆಸರು | ದಾನಿಗಳ ಹೆಸರು ಮತ್ತು ವಿಳಾಸ | ಷರತ್ತುಗಳು | ಪಾವತಿಸಿರುವ ಮೊತ್ತ |
|---|---|---|---|---|
| 1 | "ಲೇಟ್ ಅಮರಾವತಿ ಮತ್ತು ಲೇಟ್ ಕೃಷ್ಣಾಚಾರಿ ನಗದು ಬಹುಮಾನ" | ಶ್ರೀಮತಿ ಶೋಭರಾಮ್.ಕೆ # 862, 2ನೇ ಕ್ರಸ್, ಕಮ್ಮಳಗೇರಿ, ಇಂದಿರನಗರ, ಮೈಸೂರು – 570010 | M.A. in Hindi in First Attempt and securing highest marks | Rs. 50,000/- |
| 2 | "ಪ್ರೊ ಮಲ್ಲಿನಾಥ ಕುಂಬಾರರ ಅಭಿನಂದನಾ ನಗದು ಬಹುಮಾನ" | ಪ್ರೊ.ಮಲ್ಲಿನಾಥ ಕುಂಬಾರ, # 778, 12ನೇ ಮುಖ್ಯ ರಸ್ತೆ, 14ನೇ ಅಡ್ಡರಸ್ತೆ, ಕೆ.ಹೆಚ್.ರಸ್ತೆ, ಸರಸ್ವತಿಪುರಂ, ಮೈಸೂರು–570 009 | Master of Library Science in First Attempt and securing highest marks | Rs.50,000/-<br>Rs. 5,000/- |
| 3 | "ಪ್ರೊ.ಬಿ.ಎಸ್.ಕಿರಣಗಿ ಚಿನ್ನದ ಪದಕ" | Smt.Parwati B.Kiranagi, #1048, 1st Cross, 1st Main, Mysore Nirmithi Kendra Road, Bogadi North, Bogadi,2nd Stage, Mysore-570026 | M.Sc in Mathematics in First Attempt and securing highest marks | Rs.1,00,000/-<br>Rs. 50,000/- |

| | |
|---|---|
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31 (2) (IX) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಬಡ್ಡಿ ಹಣವನ್ನು ಮೇಲೆ ನಮೂದಿಸಿರುವ ಮೂರು ದಾನಿಗಳ ದತ್ತಿಯ ಷರತ್ತಿನಂತೆ ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಎರಡು ನಗದು ಬಹುಮಾನವನ್ನು ಮತ್ತು ಒಂದು ಚಿನ್ನದ ಪದಕ ನೀಡುವ ಸಂಬಂಧ "ಲೇಟ್ ಅಮರಾವತಿ ಮತ್ತು ಲೇಟ್ ಕೃಷ್ಣಾಚಾರಿ ನಗದು ಬಹುಮಾನ", ಪ್ರೊ ಮಲ್ಲಿನಾಥ ಕುಂಬಾರರ ಅಭಿನಂದನಾ ನಗದು ಬಹುಮಾನ" ಮತ್ತು "ಪ್ರೊ. ಬಿ.ಎಸ್. ಕಿರಣಗಿ ಚಿನ್ನದ ಪದಕ" ದತ್ತಿಗಳನ್ನು ಸ್ಥಾಪನೆ ಮಾಡಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| II.2 | "Desirazu Endowment Lectures" ದತ್ತಿ ಉಪನ್ಯಾಸ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31 (2) (IX) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಬಡ್ಡಿ ಹಣದಲ್ಲಿ ಪ್ರತಿ ವರ್ಷ ಆಗಸ್ಟ್/ಸೆಪ್ಟೆಂಬರ್ ಮಾಹೆಯಲ್ಲಿ ಕೆಲವು ಷರತ್ತುಗಳನ್ನು ಅಳವಡಿಸಿಕೊಂಡು **School of Planning & Architecture** ನಲ್ಲಿ **'Desirazu Endowment Lectures'** ಎಂಬ ಹೆಸರಿನಲ್ಲಿ ದತ್ತಿ ಉಪನ್ಯಾಸ ಸ್ಥಾಪಿಸಲು ಸಭೆಯು ಅನುಮೋದಿಸಿತು. |
| II.3 | 2023–24ನೇ ಶೈಕ್ಷಣಿಕ ಸಾಲಿನಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಹೊಸ ಕೋರ್ಸ್‌ಗಳು/ವಿಷಯಗಳನ್ನು ಪ್ರಾರಂಭಿಸಲು ಸ್ಥಳೀಯ ವಿಚಾರಣಾ ಸಮಿತಿಯು ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲಿಸಿ ನೀಡಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ. |

| | |
|---|---|
| | ಕುಲಸಚಿವರು ಮಾತನಾಡಿ ಸರ್ಕಾರದಿಂದ ಪ್ರವೇಶಾತಿ ಪಡೆಯಲು ಅಧಿಸೂಚಿಸಿ ಆದೇಶ ಹೊರಡಿಸಿದ್ದರಿಂದ, ಬಿಸಿಎ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆಯಲು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಮಂಡಳಿಯ ಮುಖಾಂತರ 2023–24ನೇ ಶೈಕ್ಷಣಿಕ ಸಾಲಿನಿಂದ ಸ್ಥಳೀಯ ವಿಚಾರಣ ಸಮಿತಿಯು 09 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲಿಸಿ ವರದಿಯನ್ನು ಸಲ್ಲಿಸಿರುವುದಕ್ಕೆ ಸಂಯೋಜನಾ ಮಂಜೂರಾತಿ ಆದೇಶವನ್ನು ಹೊರಡಿಸಲಾಗಿರುವ ಕ್ರಮವನ್ನು ಅನುಸಮರ್ಥನೆಗಾಗಿ ಮಂಡಿಸಲಾಗಿದೆ. ಈಗಾಗಲೇ ಶೈಕ್ಷಣಿಕ ಸಾಲಿನ ಒಂದನೇ ಸೆಮಿಸ್ಟರ್ ಸಹ ಮುಗಿದಿದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತರಲಾಗಿದೆ ಎಂದು ತಿಳಿಸಿದರು.<br><br>ಪ್ರೊ. ಡಿ. ಆನಂದ್, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ರವರು ಮಾತನಾಡಿ 09 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಸಂಯೋಜನೆಯ ನೀಡಿರುವ ಕ್ರಮಕ್ಕೆ ಅನುಮೋದನೆಯನ್ನು ನೀಡುವ ಮೊದಲು ಕೆಲವೊಂದು ವಿಚಾರಗಳನ್ನು ಸಭೆಯ ಗಮನಕ್ಕೆ ತರಲು ಮಾನ್ಯ ಕುಲಪತಿಗಳು ಒಪ್ಪಿಗೆ ನೀಡಿದಲ್ಲಿ ವಿಷಯವನ್ನು ಮಂಡಿಸುವುದಾಗಿ ತಿಳಿಸಿದರು.<br><br>ಮಾನ್ಯ ಕುಲಪತಿಗಳು ಒಪ್ಪಿಗೆಯನ್ನು ನೀಡಿದರು.<br><br>ಪ್ರೊ. ಡಿ. ಆನಂದ್‌ರವರು ಬಿಸಿಎ ಕೋರ್ಸ್‌ಗಳಿಗೆ ಅನುಮತಿ ನೀಡುವಾಗ ಕೋರ್ಸುಗಳನ್ನು ಪ್ರಾರಂಭ ಮಾಡುವುದಕ್ಕಾಗಲಿ, ಸೀಟುಗಳನ್ನು ನಿಗದಿಪಡಿಸುವುದಕ್ಕಾಗಲಿ ವಿಶ್ವವಿದ್ಯಾನಿಲಯದ ಗಮನಕ್ಕೆ ತರದೆ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯಿಂದ ನೇರವಾಗಿ ಪ್ರವೇಶಾತಿಯನ್ನು ಪಡೆಯಲು ಆದೇಶವನ್ನು ನೀಡಿದೆ. ತದನಂತರ UUCMS ನಲ್ಲಿ ಪ್ರವೇಶಾತಿ ಮಾಹಿತಿಯನ್ನು ದಾಖಲಿಸಲು ವಿಶ್ವವಿದ್ಯಾನಿಲಯದ ಆದೇಶ ಕೋರಲಾಗಿದ್ದರಿಂದ ಈ 09 ಸರ್ಕಾರಿ ಕಾಲೇಜುಗಳು ವಿಶ್ವವಿದ್ಯಾನಿಲಯದ ಒಪ್ಪಿಗೆಯನ್ನು ಕೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ಆದೇಶಾನುಸಾರ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ವಿಶ್ವವಿದ್ಯಾನಿಲಯದಿಂದ ಸ್ಥಳೀಯ ತನಿಖಾ ಸಮಿತಿಯು ಸದರಿ ಕಾಲೇಜುಗಳಿಗೆ ಭೇಟಿ ನೀಡಿ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ ವರದಿಯನ್ನು ನೀಡಿದ ನಂತರ ವಿಶ್ವವಿದ್ಯಾನಿಲಯದಿಂದ ಸಂಯೋಜನೆಯನ್ನು ನೀಡಲಾಗಿದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಸರ್ಕಾರದ ಆದೇಶವಾಗಿರುವುದರಿಂದ ಹಾಗೂ ಬಿಸಿಎ ಕೋರ್ಸ್‌ಗಳನ್ನು ಸರ್ಕಾರಿ ಕಾಲೇಜುಗಳಲ್ಲಿ ಪ್ರಾರಂಭಿಸಲಿ ಎಂಬ ಉದ್ದೇಶದಿಂದ ಕಾಲೇಜು ಶಿಕ್ಷಣ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆಯಿಂದಲೇ ನೀಡಲಾಗಿದೆ. ಒಟ್ಟು 140 ಕಾಲೇಜುಗಳಿಗೆ ನೀಡಿದ್ದಾರೆ. ಅದರಲ್ಲಿ ನಮ್ಮ ವಿಶ್ವವಿದ್ಯಾನಿಲಯದಡಿಯಲ್ಲಿ 09 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಬರುತ್ತವೆ. ಕಾಲೇಜುಗಳಿಗೆ ನೇರವಾಗಿ ಪ್ರವೇಶಾತಿ ಆದೇಶವನ್ನು ನೀಡುವಾಗ ನಮ್ಮ ವಿಶ್ವವಿದ್ಯಾನಿಲಯಕ್ಕು ಒಂದು ಪ್ರತಿಯನ್ನು ಕಳುಹಿಸುವಂತೆ ಕಾಲೇಜು ಶಿಕ್ಷಣ ಇಲಾಖೆಯವರ ಗಮನಕ್ಕೆ ತರಲಾಗಿದೆ ಎಂದು ತಿಳಿಸಿದರು.<br><br>ಪ್ರೊ. ಎಂ.ಎ. ಶ್ರೀಧರ್ ಅವರು ಮಾತನಾಡಿ ಬಿಸಿಎ ಕೋರ್ಸಿಗೆ ಪ್ರವೇಶಾತಿ ನೀಡಿರುವುದು ಸರಿಯಾದ ಕ್ರಮ. ಆದರೆ ವಿಷಯಕ್ಕೆ ಹಾಗೂ ಮೂಲಭೂತ ಸೌಕರ್ಯಗಳ ಬಗ್ಗೆ ಷರತ್ತುಗಳನ್ನು ಹಾಕಿದ್ದಾರೆಯೇ ಎಂದು ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಪ್ರಸಕ್ತ ವರ್ಷಗಳಲ್ಲಿ ಬಿಸಿಎ ಕೋರ್ಸಿಗೆ ಹೆಚ್ಚು ಮಾನ್ಯತೆ ಇರುವುದರಿಂದ ಬೇಡಿಕೆ ಹೆಚ್ಚಾಗಿರುತ್ತದೆ. ಸ್ಥಳೀಯ ವಿದ್ಯಾರ್ಥಿಗಳು ಹಾಗೂ ಪೋಷಕರು ಮನವಿ ಸಲ್ಲಿಸಿರುವುದರಿಂದ ಹಾಗೂ ಬೇಡಿಕೆ ಹೆಚ್ಚಿರುವುದರಿಂದ ಬಿಸಿಎ ಕೋರ್ಸಿಗೆ ಹೆಚ್ಚಿಗೆ ಪ್ರವೇಶಾತಿ ಪಡೆಯಲು ಅನುಮತಿ ನೀಡಿದ್ದಾರೆ. ಜೊತೆಗೆ ಬಿ.ಎ., ಬಿಎಸ್ಸಿ. ಕೋರ್ಸುಗಳಿಗೆ ಬೇಡಿಕೆ ಕಡಿಮೆಯಾಗಿರುವುದು ಇದಕ್ಕೆ ಕಾರಣವಾಗಿರುವುದರಿಂದ ಸರ್ಕಾರವು ಆದೇಶವನ್ನು ನೀಡಿದೆ. ಆದ್ದರಿಂದ ಕಡಿಮೆ ಸಮಯವಿದ್ದುದರಿಂದ ಸ್ಥಳೀಯ ತನಿಖಾ ಸಮಿತಿಯನ್ನು ಕಳುಹಿಸಿ ವರದಿಯನ್ನು ಪಡೆದ ನಂತರ ಸಂಯೋಜನೆಗೆ ಅನುಮೋದನೆ ನೀಡಿರುವುದನ್ನು ಅನುಸಮರ್ಥನೆಗಾಗಿ ವಿಷಯವನ್ನು ಮಂಡಿಸಲಾಗಿದೆ ಎಂದು ತಿಳಿಸಿದರು. |

| ಕ್ರ.ಸಂ | ಕಾಲೇಜುಗಳ ಹೆಸರು | ಕೋರ್ಸುಗಳು/ವಿಷಯ | ಪ್ರವೇಶಾತಿ |
|---|---|---|---|
| 1 | ಮಹಾರಾಣಿ ಮಹಿಳಾ ಕಲಾ ಕಾಲೇಜು, ಜೆ.ಎಲ್.ಬಿ.ರಸ್ತೆ, ಮೈಸೂರು | BCA | 60 |
| 2 | ಮಹಾರಾಣಿ ಮಹಿಳಾ ಸರ್ಕಾರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ವಾಲ್ಮೀಕಿ ರಸ್ತೆ, ಪಡವಾರಹಳ್ಳಿ, ಮೈಸೂರು. | BCA | 60 |
| 3 | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ವಿಜಯನಗರ 4ನೇ ಹಂತ, 3ನೇ ಘಟ್ಟ, ಬೆಳವಾಡಿ ಅಂಚೆ, ಹೂಟಗಳ್ಳಿ, ಮೈಸೂರು-17 | BCA | 60 |
| 4 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ಧಾರ್ಥನಗರ, ಮೈಸೂರು-570 011 | BCA | 60 |
| 5 | ಶ್ರೀ ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು-571105 | BCA | 60 |
| 6 | ಸರ್ಕಾರಿ ಮಹಿಳಾ ಕಾಲೇಜು, ಹುಣಸೂರು-571105, ಮೈಸೂರು ಜಿಲ್ಲೆ | BCA | 60 |
| 7 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿ.ನರಸೀಪುರ-571124, ಮೈಸೂರು ಜಿಲ್ಲೆ | BCA | 60 |
| 8 | ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಬಿನಿ ಕಾಲೋನಿ ಆವರಣ, ಬೈರಾಪುರ-571 124 | BCA | 60 |
| 9 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹರವೆ, ಮಲ್ಲರಾಜ ಪಟ್ಟಣ, ಪಿರಿಯಾಪಟ್ಟಣ-571107 | BCA | 60 |

| | |
|---|---|
| ತೀರ್ಮಾನ | **2023-24ನೇ ಶೈಕ್ಷಣಿಕ ಸಾಲಿನಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಹೊಸ ಕೋರ್ಸ್‌ಗಳು/ವಿಷಯಗಳನ್ನು ಪ್ರಾರಂಭಿಸಲು ಸ್ಥಳೀಯ ವಿಚಾರಣಾ ಸಮಿತಿಯು ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲಿಸಿ ನೀಡಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು.** |
| II.4 | 2023-24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್. ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ. |

ಕುಲಸಚಿವರು 2023-24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್. ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಸಮರ್ಥನೆಗಾಗಿ ಕೋರುತ್ತಾ, ಸಿಡಿಸಿಯ ನಿರ್ದೇಶಕರು ಈ ವಿಷಯದ ಬಗ್ಗೆ ಏನಾದರೂ ಮಾಹಿತಿ ಇದ್ದರೆ ನೀಡಬಹುದು ಎಂದು ತಿಳಿಸಿದರು.

ಪ್ರೊ. ಡಿ. ಆನಂದ್ ರವರು ಮಾತನಾಡಿ ಕಾಲೇಜು ಅಭಿವೃದ್ಧಿ ಮಂಡಳಿಯಿಂದ ಪರಾಮರ್ಶನಾ ಸಮಿತಿಯು ಸ್ವಾಯತ್ತತಾ ಕಾಲೇಜುಗಳಿಗೆ ಭೇಟಿ ನೀಡಿ ಪ್ರತಿ ವರ್ಷ ಸಂಯೋಜನೆಯನ್ನು ದೃಢೀಕರಣ ಮಾಡಿಕೊಳ್ಳುವ ಪದ್ಧತಿ ಇದೆ. ಅದೇ ರೀತಿ ಈ ವರ್ಷವೂ ಸಹ ಸ್ವಾಯತ್ತತಾ ಕಾಲೇಜುಗಳಿಗೆ ಭೇಟಿ ನೀಡಿ ಸೂಕ್ತ ಸಮಯದಲ್ಲಿ ವರದಿಯಲ್ಲಿ ಸಲ್ಲಿಸಿ, ಸಂಯೋಜನೆಯನ್ನು ನೀಡಲಾಗಿರುತ್ತದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. ಹಾಗೂ ಸದಸ್ಯರುಗಳಿಗೆ ಮಾಹಿತಿಯು ಬೇಕಾದಲ್ಲಿ ನೀಡುವುದಾಗಿಯೂ ತಿಳಿಸಿದರು.

ಪ್ರೊ. ಆಯಿಷಾ ಎಂ. ಷರೀಫ್ ಅವರು ಮಾತನಾಡಿ ಸ್ವಾಯತ್ತತಾ ಪರಾಮರ್ಶನಾ ಸಮಿತಿಯವರು ಐದು ಕಾಲೇಜುಗಳಿಗೆ ಭೇಟಿ ನೀಡಿ ಸಂಯೋಜನೆಯನ್ನು ನೀಡಿದ್ದಾರೆ. ವರದಿಯನ್ನು ನೀಡಿರುವುದಲ್ಲಿ ಎಲ್ಲಾ ಕಾಲೇಜುಗಳಿಗೂ ಒಂದೇ ರೀತಿಯ ಪರಾಮರ್ಶನ ಸಮಿತಿಯು ಒಂದೇ ತೆರನಾದ

ಷರತ್ತುಗಳನ್ನು ವಿಧಿಸಿರುತ್ತಾರೆ. ಆಯಾಯ ಕಾಲೇಜುಗಳ ಚಟುವಟಿಕೆ, ಸಾಮರ್ಥ್ಯ ಮತ್ತು ಫಲಿತಾಂಶ (Activities, Outcomes and Performance)ಗಳನ್ನು ಆಧರಿಸಿ ಹಾಗೂ ಷರತ್ತುಗಳನ್ನು ವಿಧಿಸುವುದರ ಜೊತೆಗೆ ವರದಿಯನ್ನು ನೀಡಬೇಕಾಗುತ್ತದೆ. ಎಲ್ಲಾ ಕಾಲೇಜಿನ ಚಟುವಟಿಕೆಗಳು ವಿಭಿನ್ನವಾಗಿರುವುದರಿಂದ ಎಲ್ಲಾ ಅಂಶಗಳನ್ನು ಗಮನಿಸಿ ಹಾಗೂ ಷರತ್ತುಗಳೊಂದಿಗೆ ವರದಿಯನ್ನು ನೀಡಬೇಕಾಗುತ್ತದೆ ಎಂದು ತಿಳಿಸಿದರು.

ಪ್ರೊ. ಡಿ. ಆನಂದ್ ರವರು ಮಾತನಾಡಿ ತಾವು ಕೊಟ್ಟಂತಹ ಮಾಹಿತಿಯನ್ನು ಮುಂದಿನ ಸಂಯೋಜನಾ ಕಾರ್ಯದಲ್ಲಿ ಅಳವಡಿಸಿಕೊಳ್ಳುವುದಾಗಿಯೂ ಹಾಗೂ ಸ್ಥಳೀಯಾ ತನಿಖಾ ಸಮಿತಿಯ ಅಧ್ಯಕ್ಷರುಗಳಿಗೆ ಹಾಗೂ ಸದಸ್ಯರುಗಳ ಗಮನಕ್ಕೂ ತರುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸ್ಥಳೀಯ ತನಿಖಾ ಸಮಿತಿಯಲ್ಲಿ ನಮ್ಮ ವಿಶ್ವವಿದ್ಯಾನಿಲಯದ ಹಿರಿಯ ಪ್ರಾಧ್ಯಾಪಕರುಗಳೇ ಇರುವುದರಿಂದಲೂ, ಸ್ವಾಯತ್ತ ಕಾಲೇಜುಗಳಾಗಿರುವುದರಿಂದಲೂ ಒಂದೇ ತೆರನಾಗಿರಬಹುದು ಎಂದು ಹಾಗೂ ಪ್ರೊ. ಆಯಿಷಾ ಎಂ. ಷರೀಫ್ ಅವರು ಕೊಟ್ಟಿರುವಂತಹ ಮಾಹಿತಿಯನ್ನು ಮುಂದೆ ಗಮನಿಸುವಂತೆ ತಿಳಿಸಿ, ಮುಂದಿನ ಶೈಕ್ಷಣಿಕ ಸಾಲಿನಿಂದ ಶೈಕ್ಷಣಿಕ ವರ್ಷ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಪರಿಶೀಲನಾ ಸಮಿತಿಯು ಸ್ವಾಯತ್ತಾ ಕಾಲೇಜುಗಳು ಭೇಟಿ ನೀಡಲು ಸಿಡಿಸಿ ನಿರ್ದೇಶಕರಿಗೆ ತಿಳಿಸಿದರು.

2023–24ನೇ ಶೈಕ್ಷಣಿಕ ಸಾಲಿಗೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್. ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು (Review) ದಿನಾಂಕ 18–11–2023ರಂದು ಭೇಟಿ ನೀಡಿ ವರದಿಯನ್ನು ಸಲ್ಲಿಸಲಾಗಿದೆ. ವಿವರವನ್ನು ಈ ಕೆಳಕಂಡಂತೆ ನೀಡಲಾಗಿದೆ.

## Course particulars:

**A. COURSES: BEFORE GRANTING AUTONOMY:**

| Course | Languages | Optionals | Combinations | Sections | Total Marks |
|---|---|---|---|---|---|
| BA | English Kannada Hindi & Sanskrit | Optional Kannada, Economics, Geography | KEG | 1 | 60 |
| | | History, Economics, Optional Kannada | HEK | 1 | 60 |
| | | History, Economics, Sociology | HES (KM) | 1 | 60 |
| | | History, Economics, Political Science | HEP | 1 | 60 |
| | | History, Economics, Geography | HEG | 1 | 60 |
| | | History, Economics, English | HEE | 1 | 60 |
| | | Public Administration, Journalism, English | PJE | 1 | 60 |
| B.Sc | English Kannada Hindi & Sanskrit | **Natural Science:** | | | |
| | | Botany, Bio-Chemistry, Micro-Biology | BBM | 01 | 60 |
| | | Botany, Chemistry, Biotechnology | BCBT | 01 | 60 |

| | | | | | |
|---|---|---|---|---|---|
| | | Biochemistry, Microbiology, Biotechnology | BMBT | 01 | 60 |
| | | **Physical Science:** | | | |
| | | Physics, Chemistry, Mathematics | PCM | 01 | 60 |
| | | Physics, Mathematics, Computer Science | PMCS | 01 | 60 |
| B.Com | English Kannada Hindi & Sanskrit | Business Taxation | *** | 02 | 120 |
| | | Finance & Accounts | | | |
| | | International Business | | | |
| | | Insurance Management | | | |
| | | Human Resource Management | | | |
| BBA | English Kannada Hindi & Sanskrit | Human Resource Management | *** | 02 | 120 |
| | | | | | |
| | | Financial Management | | | |
| | | International Business | | | |
| **Add on Courses** | | | | | |
| Certificate, Diploma, Advanced Diploma | - | Human Resource Management | - | - | - |
| | | Foreign Trade | | | |
| | | Insurance Management | | | |
| MA (Economics) | - | - | - | 1 | 30 |

**B. AFTER GRANTING AUTONOMY:**

**Continuation of UG courses with the existing courses, combinations, intake / additional intake sought for the year 2023-24**

| Course | Optionals | Sections | Total Intake | Addnl.Intake |
|---|---|---|---|---|
| M.A | Economics | 1 | 30 | - |
| M.Com | --- | 2 | 60 | - |
| M.Sc | Chemistry | 2 | 30+30 | 60 |

**2023–24ನೇ ಶೈಕ್ಷಣಿಕ ಸಾಲಿಗೆ ಸಮಿತಿಯ ಶಿಫಾರಸ್ಸು:**

The committee recommends for the continuation of autonomous status for the academic year 2023-24.

**ಪರಾಮರ್ಶನಾ ಸಮಿತಿ ವಿಧಿಸಿರುವ ಷರತ್ತುಗಳು:**

- P.G. Teachers are to be encouraged to do Ph.D. and publish articles.
- Academic activities such as seminars/conferences/workshops are to be organized and the faculty must be encouraged to participate in such

activities organized by the other Institutions.

- Faculties must be encouraged to take up Projects and Innovative programmes.
- Placement activities must be strengthened by organizing employability Training for Students.
- Results in some of the programmes are not satisfactory. Hence attempts must be made to improve the same.

**ತೀರ್ಮಾನ** **2023–24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್. ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು.**

II.5 2023–24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

2023–24ನೇ ಶೈಕ್ಷಣಿಕ ಸಾಲಿಗೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮೈಸೂರಿನ ಬಿ.ಎನ್.ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು (Review)ದಿನಾಂಕ 18.11.2023 ರಂದು ಭೇಟಿ ನೀಡಿ ವರದಿಯನ್ನು ಸಲ್ಲಿಸಲಾಗಿದೆ. ವಿವರವನ್ನು ಈ ಕೆಳಕಂಡಂತೆ ನೀಡಲಾಗಿದೆ.

## Course particulars:

**A. COURSES: BEFORE GRANTING AUTONOMY**

| Course | Languages | Optional | Combinations | Sections | Total Intake |
|---|---|---|---|---|---|
| **BA** | Kannada<br>English<br>Hindi<br>Sanskrit | History, Economics, Political Science, Geography, Kannada, English | HEP(KM)<br>HEG(KM)<br>KEP(KM),<br>KEG (KM)<br>HEE (EM) | 02 | 180 |
| **B.Sc** | | Physics, Chemistry, Mathematics, Electronics, Computer Science, Botany, Zoology, Biochemistry, Microbiology | PCM<br>PMCS<br>CBZ<br>BBM<br>CZBT | 01<br>01<br>01<br>01<br>01 | 50<br>60<br>40<br>20<br>40 |
| **B.Com** | | Compulsory Subjects | | 02 | 120 |
| **B B A** | | Compulsory Subjects | | 02 | 120 |

PG Courses Before GRANTING AUTONOMY

| | | | | |
|---|---|---|---|---|
| MSW | Compulsory Subjects | --- | 01 | 45 |

**B. AFTER GRANTING AUTONOMY:**

**Continuation of UG courses with the existing courses, combinations, intake / additional intake sought for the year 2023-24**

| Course | Languages | Optional | Combinations | Sections | Total Intake | Addnl. Intake |
|---|---|---|---|---|---|---|
| B.Sc | | Biochemistry<br>Microbiology<br>Biotechnology | BMBT | 01 | 30 | -- |

| | | | | | | |
|---|---|---|---|---|---|---|
| B.A | | Journalism,English , Public Administration | J.Eng.PA | 01 | 40 | -- |
| BCA | | Compulsory Subjects | -- | 04 | 240 | - |
| B.Com | | Compulsory Subjects | -- | 01 | 60 | -- |
| B.Voc | | Software Development<br>Food Processing & Engineering | --- | 01<br>01 | 25<br>25 | -- |
| B.Voc | | Animation and Multimedia | | 01 | 50 | -- |

Continuation of PG courses with the existing intake / additional intake sought for 2023-24

| Course | Optional | Sections | Total Intake | Addnl. Intake |
|---|---|---|---|---|
| M.Com | Compulsory Subjects | 02 | 60 | |
| M.Sc. Biotechnology | Compulsory Subjects | 02 | 40 | |
| M.Sc. Biochemistry | Compulsory Subjects | 02 | 45 | |
| M.Sc. Computer Science | Compulsory Subjects | 02 | 60 | |
| M.Sc. Physics | Compulsory Subjects | 02 | 60 | |
| M.Sc. Chemistry | Compulsory Subjects | 02 | 60 | |
| M.Sc. Mathematics | Compulsory Subjects | 02 | 40 | |
| M.Sc. Zoology | Compulsory Subjects | 02 | 40 | |
| M.Sc. Botany | Compulsory Subjects | 02 | 40 | |
| M.A. Kannada | Compulsory Subjects | 02 | 50 | |
| M.A. English | Compulsory Subjects | 01 | 30 | |
| MCA | Compulsory Subjects | 02 | 60 | |
| M.Voc | Software Development<br>Food Processing & Engineering | 01<br>01 | 50<br>50 | |

**2023–24ನೇ ಶೈಕ್ಷಣಿಕ ಸಾಲಿಗೆ ಸಮಿತಿಯ ಶಿಫಾರಸ್ಸು:**

The committee recommends for the continuation of autonomous status for the academic year 2023-24.

The committee also recommends for additional intake of 60 students to BCA programme from the year 2023-24.

**ಪರಾಮರ್ಶನಾ ಸಮಿತಿ ವಿಧಿಸಿರುವ ಷರತ್ತುಗಳು:**

- P.G. Teachers are to be encouraged to do Ph.D. and publish articles.
- Academic activities such as seminars/conferences/workshops are to be organized and the faculty must be encouraged to participate in such activities organized by the other Institutions.
- Faculties must be encouraged to take up Projects and Innovative programmes.
- Placement activities must be strengthened by organizing employability Training for Students.

| | |
|---|---|
| | • Results in some of the programmes are not satisfactory. Hence attempts must be made to improve the same. |
| ತೀರ್ಮಾನ | **2023–24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು.** |
| II.6 | 2023–24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ. |
| | 2023–24ನೇ ಶೈಕ್ಷಣಿಕ ಸಾಲಿಗೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮೈಸೂರಿನ ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು (Review) ದಿನಾಂಕ: 21.11.2023 ರಂದು ಭೇಟಿ ನೀಡಿ ವರದಿಯನ್ನು ಸಲ್ಲಿಸಲಾಗಿದೆ. ವಿವರವನ್ನು ಈ ಕೆಳಕಂಡಂತೆ ನೀಡಲಾಗಿದೆ. |

**<u>COURSE PARTICULARS</u>:**

**A. COURSES: BEFORE GRANTING AUTONOMY**

| Course | Languages | Optionals | Combinations | Sections | Total Intake |
|---|---|---|---|---|---|
| BA | English<br>Kannada<br>Hindi<br>Sanskrit | History<br>Economics<br>Geography<br>Kannada<br>Political Science<br>Social Studies<br>Criminology & Forensic Science<br>Psychology | HEG/HES<br>HGK<br>CPS | 01<br>01<br>01 | 90<br>60<br>30 |
| B.Sc. | English<br>Kannada<br>Hindi<br>Sanskrit | Physics<br>Mathematics<br>Computer Science<br>Electronics | PMCS<br>PME | 01<br>01 | 48<br>48 |
| B.Com. | English<br>Kannada<br>Hindi<br>Sanskrit | As per University prescribed syllabus | Compulsory Subjects | 06 | 360 |
| BBA | English<br>Kannada<br>Hindi<br>Sanskrit | As per University prescribed syllabus | Compulsory Subjects | 02 | 120 |
| BA | English<br>Kannada<br>Hindi<br>Sanskrit | Journalism<br>Economics<br>English Optional | JEE (Opt.) | 01 | 40 |

| | | | | | |
|---|---|---|---|---|---|
| BCA | English<br>Kannada<br>Hindi<br>Sanskrit | As per University prescribed syllabus | Compulsory Subjects | 02 | 120 |
| B.Sc. BMBT | English<br>Kannada<br>Hindi<br>Sanskrit | Biotechnology<br>Biochemistry<br>Microbiology | | 02 | 120 |
| Course | Languages | Optionals | Combinations | Sections | Total Intake |
| BBA Hotel & Hospitality | English<br>Kannada<br>Hindi<br>Sanskrit | As per University prescribed syllabus | Compulsory Subjects | 01 | 60 |
| BBA Aviation & International Tourism | English<br>Kannada<br>Hindi<br>Sanskrit | As per University prescribed syllabus | Compulsory subjects | 01 | 60 |

**B. AFTER GRANTING AUTONOMY:**

**Continuation of UG courses with the existing courses, combinations, intake / additional intake sought for the year 2023-24**

| Course | Languages | Optionals | Combinations | Sections | Total Intake | Add. Intake 2023-24 |
|---|---|---|---|---|---|---|
| BA | English<br>Kannada<br>Hindi<br>Sanskrit | History<br>Economics<br>Geography<br>Kannada<br>Political Science<br>Social Studies<br>Criminology & Forensic Science<br>Psychology | HEG/HES<br>HGK<br>CPS | 01<br>01<br>01 | 90<br>60<br>30 | - |
| B.Sc. | English<br>Kannada<br>Hindi<br>Sanskrit | Physics<br>Mathematics<br>Computer Science<br>Electronics | PMCS<br>PME | 01<br>01 | 48<br>48 | - |
| B.Com. | English<br>Kannada<br>Hindi<br>Sanskrit | As per University prescribed syllabus | Compulsory Subjects | 05 | 300 | - |
| BBA | English<br>Kannada<br>Hindi<br>Sanskrit | As per University prescribed syllabus | Compulsory Subjects | 02 | 120 | - |

| Course | Languages | Optionals | Combinations | Sections | Total Intake | Add. Intake 2023-24 |
|---|---|---|---|---|---|---|
| BA | English<br>Kannada<br>Hindi<br>Sanskrit | Journalism<br>Economics<br>English<br>Optional | JEE (Opt.) | 01 | 40 | - |
| BCA | English<br>Kannada<br>Hindi<br>Sanskrit | As per University prescribed syllabus | Compulsory Subjects | 03+1 | 180 | 60 |
| BBA Hotel & Hospitality | English<br>Kannada<br>Hindi<br>Sanskrit | As per University prescribed syllabus | Compulsory Subjects | 01 | 60 | - |
| BBA Aviation & International Tourism | English<br>Kannada<br>Hindi<br>Sanskrit | As per University prescribed syllabus | Compulsory subjects | 01 | 60 | - |

Continuation of PG courses with the existing intake / additional intake sought for 2023-24

| Course | Optionals | Sections | Total Intake | Addnl. Intake 2023-24 |
|---|---|---|---|---|
| M.Com | As per University Norms | 1 | 60 | - |
| M.C.A | As per University Norms | 1 | 60 | 60 |
| M.B.A | As per University Norms | 2 | 120 | - |
| M.Sc Biotechnology | As per University Norms | 1 | 40 | - |
| M.Sc Microbiology | As per University Norms | 1 | 40 | - |
| M.Sc Biochemistry | As per University Norms | 1 | 40 | - |
| M.Sc Chemistry | As per University Norms | 1 | 40 | - |
| M.S.W | As per University Norms | 1 | 40 | - |
| M.Sc Computer Science | As per University Norms | 1 | 40 | - |
| M.T.T.M | As per University Norms | 1 | 60 | - |

**2023–24ನೇ ಶೈಕ್ಷಣಿಕ ಸಾಲಿಗೆ ಸಮಿತಿಯ ಶಿಫಾರಸ್ಸು:**

The committee recommends for the continuation of autonomous status for the academic year 2023-24.
The committee also recommends for additional intake of 60 students to BCA and 60 students to MCA programmes (after approval of AICTE) from the year 2023-24.

**ಪರಾಮರ್ಶನಾ ಸಮಿತಿ ವಿಧಿಸಿರುವ ಷರತ್ತುಗಳು:**

- P.G. Teachers are to be encouraged to do Ph.D. and publish articles.
- Academic activities such as seminars/conferences/workshops are to be organized and the faculty must be encouraged to participate in such activities organized by the other Institutions.
- Faculties must be encouraged to take up Projects and Innovative programmes.
- Placement activities must be strengthened by organizing employability

Training for Students.

- Results in some of the programmes are not satisfactory. Hence attempts must be made to improve the same.

**ತೀರ್ಮಾನ** **2023–24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು.**

II.7 2023–24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

<u>COURSE PARTICULARS</u>:

1. UGPROGRAMMESOFFEREDBEFOREGRANTING AUTONOMY

| Programme | Optional | Combinations | Sections | Total Intake | Add.Intake sought for 2022-23 |
|---|---|---|---|---|---|
| BA | Economics,History,Political Science,Sociology Christianity, Journalism, Psychology, Functional English, | E.H.P<br>E.S.P<br>En.H.P<br>En.S.C<br>En.S.P | 03 | 180 | NIL |
| | | En.F.J | 01 | 40 | Nil |
| B.Sc | Physics,Chemistry, Mathematics, Botany,Zoology, Computer Science, Electronics, Biotechnology, Microbiology | P.C.M/C.B.Z<br>P.M.C<br>P.M.E<br>C.Bt.Z<br>B.Mb.Bt | 03<br>01<br>01<br>01 | 180<br>60<br>40<br>60 | NIL |
| B.Com. | Compulsory Subjects | | 03 | 180 | NIL |
| B.S.W | Compulsory Subjects | | 01 | 60 | NIL |
| BBA | Compulsory Subjects | | 02 | 120 | NIL |
| B.C.A | Compulsory Subjects | | 02 | 120 | 60 |

| Programme | Optional | Section | Total Intake | Add.Intake |
|---|---|---|---|---|
| M.Sc Chemistry | Compulsory Courses | 01 | 45 | NIL |
| MSW | Compulsory Courses | 01 | 30 | NIL |

PROGRAMMESOFFERED AFTERGRANTINGAUTONOMY:

2.ContinuationofUGProgrammeswiththeexistingcombinations, intake / additional intake sought for the year 2023-24

| Programme | Optional | Combinations | Sections | Total Intake | Additional Change sought for 2023-24 |
|---|---|---|---|---|---|
| B.A | Economics,History,Political Science, Sociology, Optional English, | As per NEP Regulations | 06 | 360 | |

| | | | | | |
|---|---|---|---|---|---|
| | Christianity, Journalism, Psychology, Functional English, Criminology. | | | | |
| B.Sc | Physics, Chemistry, Mathematics, Botany, Zoology, Computer Science, Electronics, Biotechnology, Microbiology, FoodScience andNutrition, Biochemistry. | | 06 | 360 | |
| BBA(TH) | TourismandHospitality | | 01 | 60 | |
| B.Com. | CompulsorySubjects | | 03 | 180 | |
| B.S.W | CompulsorySubjects | | 01 | 60 | |
| BBA | CompulsorySubjects | | 02 | 120 | |
| B.C.A | CompulsorySubjects | | 03 | 180 | |
| B.Voc | 7.HealthcareTechnology<br>8.MediaandEntertainment<br>9.Web Developer | | 01 | 60 | |
| **Languages offered in all the above UG Courses** | | | | | |
| 1.Kannada 2. English 3. Tamil 4. Malayalam 5. Urdu 6. Hindi 7. French 8.Arabic 9. Persian 10. Telugu 11.Alternate English 12. Sanskrit | | | | | |

ContinuationofPGProgrammeswiththeexistingintake/additional intake sought for 2023-24.

| Sl.No | Programmes | Optional | Sections | Total Intake | Addnl.I ntake |
|---|---|---|---|---|---|
| 1. | M.ScChemistry | AsperUniversityRegulation | 02 | 45 | Nil |
| 2. | MSW | AsperUniversityRegulation | 01 | 30 | Nil |
| 3. | M.Com | AsperUniversityRegulation | 01 | 30 | Nil |
| 4. | M.A—English | AsperUniversityRegulation | 01 | 30 | Nil |
| 5. | M.A-Journalism and masscommunication | AsperUniversityRegulation | 01 | 30 | Nil |
| 6. | M.Sc—Computer | AsperUniversityRegulation | 01 | 30 | Nil |
| 7. | M.Sc-Physics | AsperUniversityRegulation | 01 | 30 | Nil |
| 8. | M.A—Economics | AsperUniversityRegulation | 01 | 30 | Nil |
| 9. | M.Sc—Mathematics | AsperUniversityRegulation | 01 | 30 | Nil |
| 10. | M.A—Philosophy& HolisticSpirituality | AsperUniversityRegulation | 01 | 30 | Nil |
| 11. | M.Sc-Biochemistry | AsperUniversityRegulation | 01 | 30 | Nil |
| 12. | M.Sc- Psychology | AsperUniversityRegulation | 01 | 30 | Nil |
| 13. | M.Sc–Criminology & Forensic Science | AsperUniversityRegulation | 01 | 30 | Nil |

**UGCSponsoredCommunityCollegeDiplomaCourses:**

| Sl.No | Course | Specialization/Trade | Sections | Total Intake | Add. Intake |
|---|---|---|---|---|---|
| 1 | Diploma | Medical Lab Technology | 01 | 50 | Nil |
| 2 | Diploma | Healthcare | 01 | 50 | Nil |
| 3 | Diploma | Tourism, Travel and Hospitality Management | 01 | 50 | Nil |

| | | | | | |
|---|---|---|---|---|---|
| 4 | Diploma | Brad and Baking Technology | 01 | 50 | Nil |

ContinuationofDiploma/CertificateCourseswiththeexistingintake/additionalintakesoughtfor 2023-24.

| Sl No. | TitleoftheDiplomaCourse | Sections | Total Intake |
|---|---|---|---|
| UGDiploma Courses | 1.Diplomain HumanResource Management | 01 | 20 |
| | 2.DiplomainHolisticSpirituality | 01 | 20 |
| | 3. DiplomainHotelManagement | 01 | 20 |
| | 4.DiplomainInternationalRelations | 01 | 20 |
| | S. DiplomainProjectManagement | 01 | 20 |
| | 6.DiplomainSports Management | 01 | 20 |
| | 7.DiplomainFashion Designing | 01 | 20 |
| | 8.DiplomainCyberSecurity | 01 | 20 |
| | 8.DiplomainHRAnalytics | 01 | 20 |

| | | | |
|---|---|---|---|
| PG Diploma | 1.PGDiplomainHolisticSpirituality | 01 | 30 |
| | 2.PGDiplomainBusinessAnalytics | 01 | 30 |
| | 3.PGDiplomainDataScience | 01 | 30 |
| Certificate Courses | 1.CertificatecourseinFunctionalEnglish | 01 | 20 |
| | 2.CertificatecourseinFunctionalKannada | 01 | 20 |
| | 3.CertificatecourseinFunctionalHindi | 01 | 20 |
| | 4.CertificateCourseinHolisticSpirituality | 0 | 30 |
| | 5.CertificatecourseinFrench | 01 | 30 |
| | 6.CertificateCourseinFashionDesigning | 01 | 20 |
| Advanced Diploma | 1.AdvancedDiplomainSportsManagement | 01 | 20 |

**Freshcourses/subjectstobestartedfrom2023-24:**

| Programme | Courses | Optionals | Combinations | Sections | Total Intake |
|---|---|---|---|---|---|
| B.Sc. | Criminology&Forensic Science, Environmental Science, Data Science, Statistics. | As per University Regulations | As per NEP | 2 | 120 |
| BA | Visual Media, Education | As per University Regulations | As per NEP | 01 | 60 |
| MBA | As per University Regulations | As per AICTE norms | | 02 | 60 |

| | | | | | |
|---|---|---|---|---|---|
| MCA | As per University Regulations | As per AICTE norms | | 02 | 60 |

New Programmes/courses to be started from 2024-25

| Programme | Courses | Optionals | Combinations | Sections | Total Intake |
|---|---|---|---|---|---|
| MA in Kannada | - | - | - | 01 | 30 |
| MA in Hindi | - | - | - | 01 | 30 |
| M.Sc in Food Science and Nutrition | - | - | - | 01 | 30 |
| B.Sc | Education | As per University Regulations | As per NEP | 01 | 30 |
| BA | Optional Kannada | As per University Regulations | As per NEP | 01 | 30 |

**2023–24ನೇ ಶೈಕ್ಷಣಿಕ ಸಾಲಿಗೆ ಸಮಿತಿಯ ಶಿಫಾರಸ್ಸು:**

The committee recommends for the continuation of autonomous status for the academic year 2023-24. The Committee also recommends to start the new UG programme in BA-visual Media, B.Sc.-Criminology and Forensic Science -60, Environmental Science, Data Science, Statistics and PG -Programme in MBA -60, MCA-60 from the academic year 2023-24.

**ಪರಾಮರ್ಶನಾ ಸಮಿತಿ ವಿಧಿಸಿರುವ ಷರತ್ತುಗಳು:**

- P.G. Teachers are to be encouraged to do Ph.D. and publish articles.
- Academic activities such as seminars/conferences/workshops are to be organized and the faculty must be encouraged to participate in such activities organized by the other Institutions.
- Faculties must be encouraged to take up Projects and Innovative programmes.
- Placement activities must be strengthened by organizing employability Training for Students.
- Results in some of the programmes are not satisfactory. Hence attempts must be made to improve the same.

| | |
|---|---|
| ತೀರ್ಮಾನ | **2023–24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು.** |
| II.8 | 2023–24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ. |
| | 2023–24ನೇ ಶೈಕ್ಷಣಿಕ ಸಾಲಿಗೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು (Review) ದಿನಾಂಕ 21.11.2023ರಂದು ಭೇಟಿ ನೀಡಿ ವರದಿಯನ್ನು ಸಲ್ಲಿಸಲಾಗಿದೆ. ವಿವರವನ್ನು ಈ ಕೆಳಕಂಡಂತೆ ನೀಡಲಾಗಿದೆ. |

COURSE PARTICULARS:

COURSES: BEFORE GRANTING AUTONOMY

| Course | Languages | Optionals | Combinations | Sections | Total Intake |
|---|---|---|---|---|---|
| B.Sc | KANNADA<br>ENGLISH<br>URDU<br>HINDI<br>SANSKRIT | Biotechnology, Biochemistry, Chemistry,<br>Zoology, sericulture, electronics, Mathematics,<br>Computer science ,food science& Nutrition, psychology, Human Development, Microbiology, Physics, Mathematics, Electronics, Sericulture. | CBBT<br>CZBT<br>BSBt<br>EMCs<br>CFnBt<br>CPHd/CZHd<br>BMBt/BZFsn<br>CBS/CSBt<br>PCM<br>CBZ<br>PME<br>PMS | 01<br>01<br>01<br>01<br>01<br>01/01<br>01/01<br>01/01<br>02<br>02<br>01<br>01 | 60<br>48<br>48<br>40<br>48<br>24/24<br>40/40<br>24/24<br>120<br>120<br>32<br>32 |
| BCA | | As per University syllabus | - | 01 | 24 |

| | |
|---|---|
| ತೀರ್ಮಾನ | **2023–24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು.** |
| II.9 | 2021–22 & 2022–23ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳು |
| | ಕುಲಸಚಿವರು ಮಾತನಾಡಿ 2021–22 ಮತ್ತು 2022–23ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳ ವಿವರಗಳನ್ನು ಹಣಕಾಸು ಅಧಿಕಾರಿಯವರು ಸಭೆಗೆ ಮಂಡಿಸುವಂತೆ ತಿಳಿಸಿದರು.<br>ಹಣಕಾಸು ಅಧಿಕಾರಿಗಳು ಮಾತನಾಡಿ, 2021–22 ಮತ್ತು 2022–23ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳಿಗೆ ಸಂಬಂಧಿಸಿದಂತೆ, ಸಿಂಡಿಕೇಟ್ ಸಭೆ ಹಾಗೂ ಹಣಕಾಸು ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ ಎಂದು ತಿಳಿಸಿ, ವಿದ್ಯಾವಿಷಯಕ ಸಭೆಯು ಅನುಮೋದನೆ ನೀಡುವಂತೆ ಕೋರಿದರು. |
| ತೀರ್ಮಾನ | **2021–22 & 2022–23ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| II.10 | ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯ ಅಧಿನಿಯಮ ರಚನಾ ಸಮಿತಿಯು ಸಿದ್ದಪಡಿಸಿರುವ ಕರಡು ಅಧಿನಿಯಮಕ್ಕೆ ಅನುಮೋದನೆ ಪಡೆಯುವುದರ ಬಗ್ಗೆ. |
| | ಕುಲಸಚಿವರು ಮಾತನಾಡಿ ವಿಶ್ವವಿದ್ಯಾನಿಲಯದಿಂದ ಮೈಸೂರು ಯುನಿವರ್ಸಿಟಿ ಸ್ಕೂಲ್ ಆಫ್ ಇಂಜಿನಿಯರಿಂಗ್ ಪ್ರಾರಂಭಿಸುವ ಸಂಬಂಧ ಸರ್ಕಾರದಿಂದ ಪತ್ರ, ದಿನಾಂಕ: 21.12.2021ರಂದು ಆರ್ಥಿಕ ಇಲಾಖೆಯಿಂದ ಬಂದಿರುವ ಪತ್ರದ ಟಿಪ್ಪಣಿಯನ್ವಯ ಹಾಗೂ 10.01.2022ರ ಸರ್ಕಾರದ ಪತ್ರದಲ್ಲಿ ಪರಿನಿಯಮವನ್ನು ಪರಿಷ್ಕರಿಸಿ ಸಲ್ಲಿಸುವಂತೆ ತಿಳಿಸಲಾಗಿತ್ತು. ಮೈಸೂರು ಯುನಿವರ್ಸಿಟಿ ಸ್ಕೂಲ್ ಆಫ್ ಇಂಜಿನಿಯರಿಂಗ್‌ನ ಪರಿನಿಯಮವನ್ನು ಅಂತಿಮಗೊಳಿಸುವ ಸಂಬಂಧ ಮಾನ್ಯ |

| | |
|---|---|
| | ಕುಲಪತಿಗಳ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯ ತಾಂತ್ರಿಕ ಶಾಲೆಯ ಅಧಿನಿಯಮ ರಚನಾ ಸಮಿತಿಯು ದಿನಾಂಕ 06.12.2023 ರಂದು ಕರಡು ಅಧಿನಿಯಮವನ್ನು ರಚಿಸಿ ನೀಡಿರುತ್ತಾರೆಂದು ತಿಳಿಸಿದರು. ಹಾಗೂ ಸಿಂಡಿಕೇಟ್ ಹಾಗೂ ಹಣಕಾಸು ಸಮಿತಿಯಿಂದ ಅನುಮೋದನೆಯನ್ನು ಪಡೆಯಲಾಗಿದ್ದು, ವಿದ್ಯಾ ವಿಷಯಕ ಸಭೆಯ ಅನುಮೋದನೆ ದೊರಕಿದ ನಂತರ ಗೌರವಾನ್ವಿತ ಕುಲಾಧಿಪತಿಗಳ ಅಂಕಿತಕ್ಕಾಗಿ ಕೋರಿ ಸರ್ಕಾರಕ್ಕೆ ಸಲ್ಲಿಸಲಾಗುವುದೆಂದು ಸಭೆಯಲ್ಲಿ ವಿಷಯವನ್ನು ಮಂಡಿಸಿದರು. ಹಾಗೂ ಅಧಿನಿಯಮಕ್ಕೆ ತಮ್ಮ ಅಭಿಪ್ರಾಯ ಹಾಗೂ ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿಳಿಸಬಹುದೆಂದು ತಿಳಿಸಿದರು.<br><br>ಪ್ರೊ. ಎಂ.ಎ. ಶ್ರೀಧರ್ ಅವರು ಮಾತನಾಡಿ ಸ್ಕೂಲ್ ಆಫ್ ಇಂಜಿನಿಯರಿಂಗ್ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಇದೆಯಾ ಎಂದು ಸುಮಾರು ಮಂದಿ ಕೇಳುತ್ತಿದ್ದಾರೆ. ಕಾರಣ ಇಂಜಿನಿಯರಿಂಗ್ ಕಾಲೇಜು Visibility ಬಹಳ ಕಡಿಮೆ ಇದೆ. ಆದ್ದರಿಂದ ಇಂಜಿನಿಯರಿಂಗ್ ಕಾಲೇಜಿನ ಬಗ್ಗೆ ಹೆಚ್ಚಾಗಿ ಬೆಳಕು ಚೆಲ್ಲಿದರೆ, ಇನ್ನೂ ಹೆಚ್ಚಿನ ವಿದ್ಯಾರ್ಥಿಗಳು ಪ್ರವೇಶಾತಿ ಹೊಂದಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಯುನಿವರ್ಸಿಟಿ ಸ್ಕೂಲ್ ಆಫ್ ಇಂಜಿನಿಯರಿಂಗ್‌ನಲ್ಲಿ ಪ್ರಸ್ತುತ 600 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಧ್ಯಯನ ನಡೆಸುತ್ತಿದ್ದಾರೆ. Visibility ಇದೆ. ಕೆಲವೊಂದು ಸಮಸ್ಯೆಯಿದೆ. ಅವುಗಳೆಲ್ಲದರ ಬಗ್ಗೆಯೂ ಗಮನಹರಿಸುತ್ತಿದ್ದೇನೆ ಜೊತೆಗೆ ಇಂಜಿನಿಯರಿಂಗ್ ಕಾಲೇಜಿನ ಬಗ್ಗೆ ಮಾಧ್ಯಮದ ಮುಖಾಂತರ ಹಾಗೂ ಜಾಹಿರಾತುಗಳನ್ನು ನೀಡುವ ಮುಖಾಂತರ ಬೆಳಕು ಚೆಲ್ಲುವಲ್ಲಿ ಕಾರ್ಯಪ್ರವೃತ್ತರಾಗುತ್ತೇವೆ ಎಂದು ತಿಳಿಸಿದರು. |
| ತೀರ್ಮಾನ | **ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯ ಅಧಿನಿಯಮ ರಚನಾ ಸಮಿತಿಯು ಸಿದ್ದಪಡಿಸಿರುವ ಕರಡು ಅಧಿನಿಯಮಕ್ಕೆ ಹಾಗೂ ಅಧಿನಿಯಮವನ್ನು ಗೌರವಾನ್ವಿತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲು ಶೈಕ್ಷಣಿಕ ಮಂಡಳಿ ಸಭೆಯು ಅನುಮೋದನೆ ನೀಡಿತು.** |

**ಇತರೆ ವಿಷಯಗಳು:**

ಮಾನ್ಯ ಕುಲಪತಿಗಳು ಶೂನ್ಯವೇಳೆಯಲ್ಲಿ ಮಾತನಾಡಿ SEP ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ವತಿಯಿಂದ ಒಂದು ಸಮಿತಿಯನ್ನು ರಚಿಸಿ ಹಾಗೂ ಡಾ. ಬಿ. ಮಹದೇವಪ್ಪ, ಡೀನರು, ವಾಣಿಜ್ಯ ನಿಕಾಯ ಇವರ ಅಧ್ಯಕ್ಷತೆಯಲ್ಲಿ ಪಠ್ಯಕ್ರಮವನ್ನು ತುರ್ತಾಗಿ ರಚಿಸಲು ಕ್ರಮತೆಗೆದುಕೊಳ್ಳಬೇಕಾಗಿದೆ ಎಂದು ತಿಳಿಸಿದರು.

ಪ್ರೊ. ಬಿ. ಮಹದೇವಪ್ಪ, ಡೀನರು, ವಾಣಿಜ್ಯ ನಿಕಾಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮಾತನಾಡಿ, ಸ್ನಾತಕ ಕಾಲೇಜಿನಲ್ಲಿ UG program structure ಪ್ರಕಾರ 6ನೇ ಸೆಮಿಸ್ಟರ್‌ನಲ್ಲಿ Internshipನ ಕಾರ್ಯಭಾರ ಮತ್ತು ಪತ್ರಿಕೆ ಬಗ್ಗೆ ಕೇಳುತ್ತಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಯವರು ಮಾತನಾಡಿ, KSHECನಲ್ಲಿ ಈ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಶ್ರೀ ರೇವಣ್ಣ, ಉಪಕುಲಸಚಿವ (ಶೈಕ್ಷಣಿಕ) ರವರು 6ನೇ ಸೆಮಿಸ್ಟರ್‌ನಲ್ಲಿ ಇಂಟರ್ನ್‌ಶಿಪ್ ಹೇಗೆ ಮಾಡುವುದು ಎಂದು ಕೇಳುತ್ತಿದ್ದಾರೆ. ಜನವರಿ ಮುಗಿಯುತ್ತಾ ಬಂದಿದ್ದರೂ ಸಹ ಯಾವುದೇ ನಿರ್ದೇಶನ ಕೊಡಲು ಸಾಧ್ಯವಾಗಿರುವುದಿಲ್ಲ. ನಮಗೆ ಮೌಖಿಕವಾಗಿ ಹೇಳಿರುವ ಪ್ರಕಾರ structureನಲ್ಲಿ ಏನೇನು component ಇದೆ ಆ component ರೀತಿಯೇ ಮಾಡಿ ಎಂದು ತಿಳಿಸಲಾಗಿದೆ. ಕೆಲವು ಕಾಲೇಜುಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳಿರುವುದರಿಂದ ಅಷ್ಟೊಂದು ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಮಾಡಲು ಸಾಧ್ಯವಿರುವುದಿಲ್ಲ. ಆದ್ದರಿಂದ ನಾವು ಪಠ್ಯಕ್ರಮವನ್ನು ಸಿದ್ದಗೊಳಿಸಬೇಕು. Model component ತೆಗೆದುಕೊಂಡು ಇಂಟರ್ನ್‌ಶಿಪ್ ಹೇಗಿರುತ್ತದೆ ಎಂದು ಪರಾಮರ್ಶಿಸಿ ಪಠ್ಯಕ್ರಮವನ್ನು ನವೀಕರಿಸಬೇಕು, ಇಲ್ಲದಿದ್ದಲ್ಲಿ ಉನ್ನತ ಶಿಕ್ಷಣ ಇಲಾಖೆಯವರು ಸಿದ್ಧಪಡಿಸಿದ ಪಠ್ಯಕ್ರಮವನ್ನು ನಾವು ಅಳವಡಿಸಿಕೊಳ್ಳಬೇಕು.

ಸಂಬಂಧಪಟ್ಟ ಸದಸ್ಯರು ಸೇರಿ ಪಠ್ಯಕ್ರಮವನ್ನು ಸಿದ್ದಗೊಳಿಸಬೇಕು. ಮೈಸೂರಿನಲ್ಲಿನ ಕಾಲೇಜುಗಳ ವಿದ್ಯಾರ್ಥಿಗಳು ಕೆಲವು ಪ್ರಾಯೋಜಿತ ಸಂಸ್ಥೆಗಳಿಗೆ ಹೋಗಬಹುದು. ಆದರೆ ಸಕಲೇಶಪುರ, ಹೊಳೆನರಸೀಪುರ, ಅರಸೀಕೆರೆಯಲ್ಲಿ ಇಂಟರ್ನ್‌ಶಿಪ್ ಸಿಗುವುದಿಲ್ಲ. SEC paper ಗಳನ್ನು ಸಿದ್ಧಪಡಿಸುವ ರೀತಿಯಲ್ಲಿಯೇ ಇಂಟರ್ನ್‌ಶಿಪ್ ಮಾಡಿ ಒಂದು model ರೀತಿ ಮಾಡಬಹುದು. ಕಲಾ, ವಾಣಿಜ್ಯ, ವಿಜ್ಞಾನ, ಬಿಸಿಎ ಪ್ರೋಗ್ರಾಂಗಳು ಸೇರಿ ಏಕರೂಪದಲ್ಲಿರಬೇಕು. Cyber security, digital fluency ಅದೇ ರೀತಿ ಇಂಟರ್ನ್‌ಶಿಪ್ ಬಗ್ಗೆ ವಿದ್ಯಾರ್ಥಿಗಳಿಗೆ ಹೇಗೆ ಉತ್ತಮವಾಗಿ ಮಾಡಬಹುದು ಎಂಬ ಕಲ್ಪನೆ ಸಿಗುತ್ತದೆ. ಕೆಲವು ವಿದ್ಯಾರ್ಥಿಗಳು ತಾವೇ ಇಂಟರ್ನ್‌ಶಿಪ್ ಮಾಡುತ್ತೇವೆಂದರೆ ಅದು ಸ್ವಾಗತಾರ್ಹ. ಎಲ್ಲರಿಗೂ ಇಂಟರ್ನ್‌ಶಿಪ್ ಮಾಡಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದರು.

ಪ್ರೊ. ಬಿ. ಮಹದೇವಪ್ಪರವರು ಮಾತನಾಡಿ, ನಾವು ಯಾವುದೇ ಸ್ಪಷ್ಟೀಕರಣವನ್ನು ಸ್ವೀಕರಿಸಿಲ್ಲ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಇಲಾಖೆಯು ಯಾವುದೇ ಸ್ಪಷ್ಟೀಕರಣವನ್ನು ನೀಡುವುದಿಲ್ಲ ಎಂದು ತಿಳಿಸಿದರು. ಮೊದಲು ಪಠ್ಯಕ್ರಮವನ್ನು ಸಿದ್ದಪಡಿಸಿ 2 ಕ್ರೆಡಿಟ್ ಪೇಪರ್‌ಗೆ ಯಾರು ಬೋಧನೆ ಮಾಡುತ್ತಾರೋ ಅವರೇ ಮಾಡಬೇಕು. ವಾಣಿಜ್ಯ ವಿಷಯದಲ್ಲಿ ಸ್ವಲ್ಪ ಕಷ್ಟವಾಗುತ್ತದೆ. ಎಲ್ಲಾ ಸದಸ್ಯರು ಸಲಹೆಗಳನ್ನು ಕೊಟ್ಟಲ್ಲಿ ಒಂದು ಪಠ್ಯಕ್ರಮವನ್ನು ಸಿದ್ದಪಡಿಸಬಹುದು. ಇಂಡಸ್ಟ್ರಿಗೆ ಭೇಟಿ ನೀಡುವ ಬಗ್ಗೆ ಕಲ್ಪನೆ ಮಾಡಿಕೊಂಡು ಒಂದು ಮಾದರಿಯನ್ನು ರೂಪಿಸಿ ವಿದ್ಯಾರ್ಥಿಗಳಿಗೆ ಒಂದು ಐಡಿಯ ಸಿಗುತ್ತದೆ. ಮುಂದೆ ಅವರು ಒಂದು ಸಂಸ್ಥೆಗೆ ಹೋದಲ್ಲಿ ಅನುಕೂಲವಾಗುತ್ತದೆಯೆಂದು ತಿಳಿಸಿದರು. ಕೆಲವರು ಪ್ರಾಜೆಕ್ಟ್ ವರ್ಕ್ ಕೊಡಿ ಎಂದು ಹೇಳುತ್ತಾರೆ, ಪ್ರಾಜೆಕ್ಟ್ ವರ್ಕ್ ಕೊಟ್ಟರೆ ನಕಲು ಮಾಡುವ ಸಂಭವವಿರುವುದರಿಂದ ನಾವೇ 2 ಕ್ರೆಡಿಟ್ ಪೇಪರ್‌ಗೆ ಪಠ್ಯಕ್ರಮವನ್ನು ಸಿದ್ದಪಡಿಸಬೇಕೆಂದು ತಿಳಿಸಿದರು. ಎನ್.ಇ.ಪಿ ಹಾಗೂ ಎಸ್‌ಇಪಿಯಲ್ಲಿ ಗೊಂದಲವಿದೆ. ನಾಲ್ಕನೇ ವರ್ಷ ಇರುವುದೋ ಇಲ್ಲವೋ ಎಂಬ ಬಗ್ಗೆ ಉನ್ನತ ಶಿಕ್ಷಣ ಇಲಾಖೆಯಿಂದ ಸರಿಯಾದ ಮಾಹಿತಿ ಇಲ್ಲ. ದಿನಾಂಕ 8–2–2024ರಂದು ಉನ್ನತ ಶಿಕ್ಷಣ ಇಲಾಖೆಯು ಸಭೆಯನ್ನು ಏರ್ಪಡಿಸಿದ್ದು, ಈ ವಿಷಯದ ಬಗ್ಗೆ ಚರ್ಚೆ ನಡೆಸುತ್ತಾರೆ. 3 ವರ್ಷ ಅವಧಿಗೆ ಸೀಮಿತಗೊಳಿಸುತ್ತಾರೆ ಎಂಬುದು ನನ್ನ ಅನಿಸಿಕೆ ಎಂದು ತಿಳಿಸಿದರು. 4ನೇ ವರ್ಷ ಕೊಡಬೇಕಾದರೆ ಷರತ್ತುಗಳನ್ವಯ ಆಯಾ ಕಾಲೇಜುಗಳಿಗೆ ನೀಡಲಾಗುತ್ತದೆ. ಎನ್‌ಇಪಿಯಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ವರ್ಷದ ಸ್ನಾತಕ ಪ್ರೋಗ್ರಾಂಗಳಿಗೆ ಪಠ್ಯಕ್ರಮ ಬದಲಾವಣೆಯಾಗಿದೆ. ಅದರ ಮುಂದುವರಿಕೆಯಾಗಿ ನಾವು ಸ್ನಾತಕೋತ್ತರ ಪದವಿಯ ಪಠ್ಯಕ್ರಮವನ್ನು ಬದಲಾವಣೆ ಮಾಡಬೇಕು. ಆದ್ದರಿಂದ ಕಾರ್ಯಭಾರದ ಬಗ್ಗೆ ಹಾಗೂ ಪಠ್ಯಕ್ರಮದ ಬಗ್ಗೆ ಗೊಂದಲವಾಗಿದೆ ಎಂದು ತಿಳಿಸಿದರು.

ಪ್ರೊ. ಬಿ. ಮಹದೇವಪ್ಪ ರವರು ಮಾತನಾಡಿ, ಉನ್ನತ ಶಿಕ್ಷಣ ಇಲಾಖೆಯವರೇ ಒಂದು ಸುತ್ತೋಲೆಯನ್ನು ಹೊರಡಿಸಬೇಕು ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ರಾಷ್ಟ್ರೀಯ ನೀತಿ ಜಾರಿಗೊಳಿಸುವ ಸಂದರ್ಭದಲ್ಲಿ ಕಾಲಾವಕಾಶ ಕಡಿಮೆ ಇದ್ದ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ ಇಲಾಖೆಯವರು ನೀಡಿದ ಪಠ್ಯಕ್ರಮವನ್ನೇ ಎಲ್ಲಾ ವಿಶ್ವವಿದ್ಯಾನಿಲಯಗಳು ಅಳವಡಿಸಿಕೊಂಡಿವೆ. ಆದ್ದರಿಂದ ಎಲ್ಲಾ ನಿಕಾಯದ ಡೀನರು, ಹಿರಿಯ ಪ್ರಾಧ್ಯಾಪಕರು ಇಂಟರ್ನ್‌ಶಿಪ್ ಬಗ್ಗೆ ವಾಣಿಜ್ಯ ಹಾಗೂ ಎಂಬಿಎ ವಿಭಾಗದವರು ಕೆಲಸ ಮಾಡಬೇಕೆಂದು ತಿಳಿಸಿದರು, ಏಕೆಂದರೆ ವಾಣಿಜ್ಯ ವಿಭಾಗದ ಹೆಚ್ಚಿನ ವಿದ್ಯಾರ್ಥಿಗಳೇ ಇಂಟರ್ನ್‌ಶಿಪ್ ಮಾಡುವವರು ಎಂದು ತಿಳಿಸಿದರು.

ಪ್ರೊ. ಆಯಿಷಾ ಎಂ. ಷರೀಫ್‌ರವರು ಮಾತನಾಡಿ, ಕೆಲವು ಕೊರತೆಗಳು ಮತ್ತು ಸವಾಲುಗಳು ಇದ್ದೆ ಇರುತ್ತದೆ ಎಂದು ತಿಳಿಸಿದರು.

ಪ್ರೊ. ಎಂ.ಎ. ಶ್ರೀಧರ್ ರವರು ಮಾತನಾಡಿ, ಮಹಾಜನ ಕಾಲೇಜಿನಲ್ಲಿ ಬಿಸಿಎ ವ್ಯಾಸಂಗ ಮಾಡುತ್ತಿರುವ 300 ವಿದ್ಯಾರ್ಥಿಗಳಿದ್ದು, ಇಂಟರ್ನ್‌ಶಿಪ್‌ಗೆ ತೆರಳಿದ್ದಲ್ಲಿ ಅವರ ಹಾಜರಾತಿ ಹಾಗೂ ಬೇರೆ ತರಗತಿಗಳನ್ನು ನಿರ್ವಹಿಸುವುದು ಹೇಗೆ ಎಂದು ಪ್ರಶ್ನಿಸಿದರು. ಬೆಳಗ್ಗೆಯಿಂದ ಸಂಜೆಯವರೆಗೂ Internshipನಲ್ಲೇ ತೊಡಗಿಸಿಕೊಂಡಲ್ಲಿ ಬೇರೆ subjectನ್ನು ಹೇಗೆ ನಿರ್ವಹಿಸುತ್ತಾರೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಕುಲಸಚಿವರು ಮಾತನಾಡಿ ಇಂಜಿನಿಯರಿಂಗ್ ಹಾಗೂ ಕಾನೂನು ವಿದ್ಯಾರ್ಥಿಗಳು ಸಹ ಇಂಟರ್ನ್‌ಶಿಪ್‌ಗೆ ಹೋಗುತ್ತಾರೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಸೆಮಿಸ್ಟರ್ ಅಂತರಗಳಲ್ಲಿ ವಿದ್ಯಾರ್ಥಿಗಳಿಗೆ ರಜೆಯನ್ನು ಜಾಸ್ತಿ ಕೊಡುತ್ತಿಲ್ಲ. ಮುಂದಿನ ಶೈಕ್ಷಣಿಕ ವರ್ಷದಿಂದ calendar of events ಅನ್ನು ಸರಿಪಡಿಸಲಾಗುವುದೆಂದು ತಿಳಿಸಿದರು. 6ನೇ ಸೆಮಿಸ್ಟರ್ ದಿನಾಂಕ 12-02-2024 ರಿಂದ ಪ್ರಾರಂಭವಾಗುವುದರಿಂದ ವಾಣಿಜ್ಯ ಹಾಗೂ ವ್ಯವಹಾರ ಆಡಳಿತ ವಿಭಾಗದವರು ಸೇರಿ ಪಠ್ಯಕ್ರಮವನ್ನು ಮಾದರಿಯಾಗಿ ಸಿದ್ದಪಡಿಸಿ ಯಾರು ಬೋಧನೆ ಮಾಡಬೇಕು ಹಾಗೂ ಯಾರು ಮೌಲ್ಯಮಾಪನ ಮಾಡಬೇಕೆಂದು ಸಲಹೆ ನೀಡಬೇಕೆಂದು ತಿಳಿಸಿದರು. ಪ್ರೊ. ಬಿ. ಮಹದೇವಪ್ಪ ನವರ ಅಧ್ಯಕ್ಷತೆಯಲ್ಲಿ ವಾಣಿಜ್ಯ, ಕಲಾ, ವಿಜ್ಞಾನಗಳ ಡೀನರುಗಳು ಹಾಗೂ ಹಿರಿಯ ಪ್ರಾಧ್ಯಾಪಕರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ, ಈ ಸಮಿತಿಯು ಪಠ್ಯಕ್ರಮವನ್ನು ಸಿದ್ದಪಡಿಸಬೇಕೆಂದು ಮಾನ್ಯ ಕುಲಪತಿಯವರು ಸೂಚಿಸಿದರು.

ಪ್ರೊ. ಎಂ.ಎ. ಶ್ರೀಧರ್ ರವರು ಮಾತನಾಡಿ, ಕಾರ್ಖಾನೆ/ಕಂಪನಿಯ ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಿದ್ದಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ವಿಶ್ವವಿದ್ಯಾನಿಲಯದಿಂದ ಅವರಿಗೆ ಸೌಲಭ್ಯಗಳನ್ನು ನೀಡಬೇಕೆಂದು ಸಲಹೆ ನೀಡಿದರು.

ಕುಲಸಚಿವರು ಮಾತನಾಡಿ, ಇದು ಉತ್ತಮ ಸಲಹೆಯಾಗಿದ್ದು, 100 ವಿದ್ಯಾರ್ಥಿಗಳು ಕಂಪನಿಗಳಿಗೆ ಭೇಟಿ ನೀಡುವ ಬದಲು ಕಂಪನಿಯ ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಿದಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸಿಬಿಸಿಎಸ್ ಪದ್ಧತಿ ಬಗ್ಗೆ ವಿದ್ಯಾರ್ಥಿಗಳಿಗೆ ಗೊತ್ತಿರುವುದಿಲ್ಲ. ಸ್ವಾಯತ್ತ ಕಾಲೇಜಿನಲ್ಲಿ ಕೈಗಾರಿಕಾ ವ್ಯಕ್ತಿಗಳಿರುತ್ತಾರೆ. ಬೇರೆ ಕಾಲೇಜುಗಳಲ್ಲಿ ಆಸಕ್ತಿ ಇದ್ದವರು ಬೋಧಿಸಬಹುದು. ಅಂತಹ ವ್ಯಕ್ತಿಗಳನ್ನು ನಾವು ಆಹ್ವಾನಿಸಿ ಅವರಿಂದ ಇಂಟರ್ನ್‌ಶಿಪ್ ಬಗ್ಗೆ ಬೋಧನೆ ಮಾಡಲು ಅವಕಾಶ ನೀಡಬಹುದೆಂದು ತಿಳಿಸಿದರು. ಮುಂದುವರೆದು, ಕೈಗಾರಿಕಾ ವ್ಯಕ್ತಿಗಳನ್ನು ಆಹ್ವಾನಿಸುವ ಸಂಬಂಧ ಕಾಲೇಜಿನ ಪ್ರಾಂಶುಪಾಲರ ವಿವೇಚನೆಗೆ ಸೇರಿದ್ದು ಎಂದು ತಿಳಿಸಿದರು.

ಪ್ರೊ. ಮಾರುತಿ ಟಿ.ಆರ್., ಡೀನರು, ಕಾನೂನು ನಿಕಾಯ ಇವರು ಮಾತನಾಡಿ, ಕಾನೂನಿಗೆ ಸಂಬಂಧಿಸಿದ ಇಂಟರ್ನ್‌ಶಿಪ್‌ನ್ನು ನಡೆಸಲಾಗಿದೆ ಎಂದು ತಿಳಿಸಿದರು. ಜನವರಿ ತಿಂಗಳಿನಲ್ಲಿ ಸರ್ವೋಚ್ಛ ನ್ಯಾಯಾಲಯಕ್ಕೆ ವಿದ್ಯಾರ್ಥಿಗಳು ಭೇಟಿ ಮಾಡಿದ್ದಾರೆಂದು, ಒಂದು ಪ್ರೋಗ್ರಾಂಗೆ 4 ಕ್ರೆಡಿಟ್‌ಗಳಿರುವುದೆಂದು ಹಾಗೂ ನಮ್ಮಲ್ಲಿ ಸಾಕಷ್ಟು ವಿಧಿವಿಜ್ಞಾನ ಪ್ರಯೋಗಾಲಯಗಳಿರುವುದೆಂದು ತಿಳಿಸಿದರು.

ಪ್ರೊ. ಆನಂದ್ ಡಿ. ರವರು ಮಾತನಾಡಿ, ಬಿಸಿಎ, ಬಿಬಿಎ ಪ್ರೋಗ್ರಾಂಗಳಿಗೆ AICTE ರವರಿಂದ ಈ ಶೈಕ್ಷಣಿಕ ವರ್ಷದಿಂದ ಕಡ್ಡಾಯವಾಗಿ ಅನುಮೋದನೆ ಪಡೆಯಬೇಕೆಂದು ಪತ್ರ ಮುಖೇನ ತಿಳಿಸಲಾಗಿದೆ

ಎಂದು ಸಭೆಯ ಗಮನಕ್ಕೆ ತಂದರು. ಕೆಲವು ಕಾಲೇಜಿನವರು ಬಿಸಿಎ, ಬಿಬಿಎ ಪ್ರೋಗ್ರಾಂಗಳಿಗೆ AICTE ಯಿಂದ ಅನುಮೋದನೆ ಪಡೆಯುವ ಸಲುವಾಗಿ ವಿಶ್ವವಿದ್ಯಾನಿಲಯದಿಂದ ನಿರಾಪೇಕ್ಷಣಾ ಪತ್ರವನ್ನು ಕೇಳುತ್ತಿದ್ದು, ಈ ಸಂದರ್ಭದಲ್ಲಿ ನಾವು ಏನು ಕ್ರಮ ಕೈಗೊಳ್ಳಬೇಕೆಂದು ಹಾಗೂ ಉನ್ನತ ಶಿಕ್ಷಣ ಇಲಾಖೆಯಾಗಲಿ ಅಥವಾ ಸರ್ಕಾರವಾಗಲಿ ಯಾವುದೇ ನಿರ್ದೇಶನ ನೀಡಿಲ್ಲ ಎಂದು ತಿಳಿಸಿದರು. ಬಿಬಿಎ ಹಾಗೂ ಬಿಸಿಎ ಪ್ರೋಗ್ರಾಂಗಳನ್ನು ನಡೆಸಲು ಅನುಮೋದನೆ ಪಡೆದುಕೊಳ್ಳಬೇಕು ಎಂದು AICTE ಆದೇಶಿಸಿದೆ. ಖಾಸಗಿ ಕಾಲೇಜುಗಳವರು AICTEಯಿಂದ ಅನುಮೋದನೆ ಪಡೆದಿರುವುದನ್ನೇ ಪ್ರಮುಖವಾಗಿ ಬಿಂಬಿಸಿ ಪ್ರವೇಶಾತಿ ಹೆಚ್ಚಿಸಿಕೊಳ್ಳಬಹುದು. AICTEಯಿಂದ ಅನುಮೋದನೆ ಪಡೆದುಕೊಳ್ಳದ ಕಾಲೇಜುಗಳನ್ನು ಕಪ್ಪು ಪಟ್ಟಿಗೆ ಸೇರಿಸುವ ಸಾಧ್ಯತೆ ಇರುತ್ತದೆ. ಸರ್ಕಾರಿ ಕಾಲೇಜುಗಳಿಗೂ AICTEಯಿಂದ ಅನುಮೋದನೆಯ ಅಗತ್ಯವಿದೆಯೇ ಎಂಬಿತ್ಯಾದಿ ಪ್ರಶ್ನೆಗಳು ಉದ್ಭವಿಸುತ್ತವೆಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಯವರು ಮಾತನಾಡಿ, AICTE ಹೇಳಿದ ತಕ್ಷಣ ಖಾಸಗಿ ಕಾಲೇಜಿನವರು ಪಾಲಿಸುತ್ತಾರೆ ಆದರೆ ಸರ್ಕಾರಿ ಕಾಲೇಜುಗಳು ಏನು ಮಾಡುತ್ತವೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಉನ್ನತ ಶಿಕ್ಷಣ ಇಲಾಖೆಯ ಗಮನಕ್ಕೆ ತರಲಾಗುವುದೆಂದು ತಿಳಿಸಿದರು.

ಪ್ರಾಂಶುಪಾಲರು, ಛಾಯಾದೇವಿ ಬಿ.ಎಡ್ ಕಾಲೇಜು ಇವರು ಮಾತನಾಡಿ, ಅಂಕಪಟ್ಟಿಗಳನ್ನು ನಿಗದಿತ ಕಾಲಮಿತಿಯಲ್ಲಿ ನೀಡಬೇಕೆಂದು ಕೋರಿದರು. ಮುಂದುವರೆದು, ಅಂಕಪಟ್ಟಿ ನೀಡದ ಕಾರಣ ಕೆಲವು ಪದವೀಧರರು cash prize/ ಯುವನಿಧಿ ಯೋಜನೆಗೆ ನೊಂದಾಯಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿದರು. ವಿಶ್ವವಿದ್ಯಾನಿಲಯದಿಂದ ಕೊಡುವ ಸ್ಕೋರ್‌ಶೀಟ್‌ಗಳನ್ನು ಸಂಬಂಧಿಸಿದ ಇಲಾಖೆಯವರು ಸ್ವೀಕರಿಸುತ್ತಿಲ್ಲ. ಸಾಫ್ಟ್‌ಕಾಪಿಯನ್ನಾದರೂ ವಿದ್ಯಾರ್ಥಿಗಳಿಗೆ ನೀಡಿದ್ದಲ್ಲಿ ಅವರು ಅದರ ಪ್ರಿಂಟ್‌ಗಳನ್ನು ತೆಗೆದುಕೊಳ್ಳುತ್ತಾರೆಂದು ಸಭೆಯಲ್ಲಿ ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, UUCMSನ ತಾಂತ್ರಿಕ ಲೋಪದಿಂದ ಸಮಸ್ಯೆಯಾಗಿದೆ. ನಾವೇ ಅಂಕಪಟ್ಟಿ ಮುದ್ರಿಸಿ ಕೊಡುತ್ತೇವೆಂದು ಸರ್ಕಾರ ಹೇಳಿದೆ. ವಿಶ್ವವಿದ್ಯಾನಿಲಯದಿಂದ ಅಂಕಪಟ್ಟಿಯನ್ನು ಮುದ್ರಿಸುವ ಅವಕಾಶವಿಲ್ಲವೆಂದು ತಿಳಿಸಿದರು. ವಿದೇಶಿ ವಿದ್ಯಾರ್ಥಿಗಳ ವೀಸಾ ಮುಗಿಯುವ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ ಇಲಾಖೆಯ ನಿರ್ದೇಶನದಾನುಸಾರ ವಿದೇಶಿ ವಿದ್ಯಾರ್ಥಿಗಳಿಗೆ ಮಾತ್ರ ಪ್ರಾವಿಷನ್ ಸರ್ಟಿಫಿಕೇಟ್ (ಅಂಕಪಟ್ಟಿ) ನೀಡಲಾಗುತ್ತಿದೆ. ಅಂಕಪಟ್ಟಿಯ ಬಗ್ಗೆ ಇಲಾಖೆಯ ಗಮನಕ್ಕೆ ತಂದರೆ ಯಾವಾಗಲೂ ಸಮಸ್ಯೆ ತರುತ್ತೀರಿ ಎಂದು ತಿಳಿಸುತ್ತಾರೆ ಎಂದು ತಿಳಿಸಿದರು.

ಪ್ರಾಂಶುಪಾಲರು, ಛಾಯಾದೇವಿ ಬಿ.ಎಡ್ ಕಾಲೇಜು ಇವರು ಮಾತನಾಡಿ, Transcript ಆದರೂ ನೀಡಿ ಎಂದು ಕೋರಿದರು.

ಕುಲಸಚಿವರು ಮಾತನಾಡಿ, ಕಂದಾಯ ಇಲಾಖೆಯಲ್ಲಿ ಭೂಮಿ ತಂತ್ರಾಂಶದ ಮೂಲಕ ಲಕ್ಷಾಂತರ ಜನರಿಗೆ ದಾಖಲೆಗಳನ್ನು ಒದಗಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಮೂರು ವರ್ಷಗಳಿಂದಲೂ ಅಂಕಪಟ್ಟಿ ನೀಡಲು ಸಾಧ್ಯವಾಗುತ್ತಿಲ್ಲ. ಭೂಮಿ ತಂತ್ರಾಂಶದ ರೀತಿಯಲ್ಲಿಯೇ ವಿಶ್ವವಿದ್ಯಾನಿಲಯಗಳ ಅಂಕಪಟ್ಟಿಗೆ ಒಂದು ಮಾದರಿ ರೂಪಿಸಬಹುದು. ಪ್ರಥಮವಾಗಿ ಮೈಸೂರು ವಿಶ್ವವಿದ್ಯಾನಿಲಯ ಪ್ರಾರಂಭಿಸುವುದು ಉತ್ತಮವೆಂದು ಹಾಗೂ ಎಲ್ಲಾ ಮಾಹಿತಿಗಳನ್ನು ದಾಖಲು ಮಾಡಿದರೆ ವಿದ್ಯಾರ್ಥಿಗಳು ಪಡೆಯಲು ಅನುಕೂಲವಾಗುತ್ತದೆಯೆಂದು ಸಲಹೆ ನೀಡಿದರು.

ಪ್ರೊ. ಆನಂದ್ ಡಿ. ರವರು ಮಾತನಾಡಿ, ವಿಶ್ವವಿದ್ಯಾಲಯಗಳಲ್ಲಿ ಪಿಹೆಚ್‌ಡಿ ಪ್ರವೇಶಾತಿಗೆ ಸಂಬಂಧಿಸಿದಂತೆ ಏಕೀಕೃತ ವ್ಯವಸ್ಥೆಯಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಲು ನಿರ್ಧರಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಸರ್ಕಾರದ ಈ ಕ್ರಮದಿಂದ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಸ್ವಾಯತ್ತತೆಗೆ ಧಕ್ಕೆ ಉಂಟಾಗುತ್ತದೆ ಆದ್ದರಿಂದ ಸರ್ಕಾರ ಈ ವಿಷಯದಲ್ಲಿ ಹಸ್ತಕ್ಷೇಪ ಮಾಡಬಾರದು. ಅಲ್ಲದೇ ಇದು ವಿದ್ಯಾರ್ಥಿಗಳಿಗೆ ಪೂರಕವೂ ಆಗುವುದಿಲ್ಲ ಎಂದು ತಿಳಿಸಿದರು.

ಪ್ರೊ. ಎಂ.ಎ. ಶ್ರೀಧರ್ ರವರು ಮಾತನಾಡಿ, ಎಲ್ಲವನ್ನು ಕೇಂದ್ರೀಕೃತ ಹಾಗೂ ಏಕೀಕೃತ ವ್ಯವಸ್ಥೆಯಲ್ಲಿ ನಿರ್ವಹಿಸಿದರೆ ವಿಶ್ವವಿದ್ಯಾಲಯಗಳಿಗೆ ಇರುವ ಪಾತ್ರವೇನು? ಅಧಿಕಾರವೇ ಇಲ್ಲದಂತಾಗುತ್ತದೆ. ಈಗಿನ ವ್ಯವಸ್ಥೆಯಲ್ಲಿ ಅಗತ್ಯವಿದ್ದಾಗ ಪರೀಕ್ಷೆ ನಡೆಸಿ ಪ್ರವೇಶ ಕೊಡಲಾಗುತ್ತಿದೆ. ಸರ್ಕಾರದಿಂದಲೇ ವರ್ಷಕ್ಕೊಮ್ಮೆ ನಡೆಸಿದರೆ ವಿದ್ಯಾರ್ಥಿಗಳ ಸಮಯ ಹಾಳಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಎಲ್ಲಾ ಭಾಗದವರು ಹೆಚ್ಚಿನ ಸಂಖ್ಯೆಯಲ್ಲಿ ಪಿಹೆಚ್.ಡಿ. ಮಾಡಬೇಕು ಎಂಬುವುದು ಹೊಸ ವ್ಯವಸ್ಥೆಯ ಉದ್ದೇಶವಾಗಿದೆ ಎಂಬುದಾಗಿ ತಿಳಿಸಿದರು. ಖಾಯಂ ಬೋಧಕರ ಸಂಖ್ಯೆ ಇಳಿಮುಖವಾಗಿದೆ ಎಂದು ಸಭೆಯ ಗಮನಕ್ಕೆ ತಂದಿರುವುದಾಗಿ ತಿಳಿಸಿದರು.

ಪ್ರೊ. ಮಂಜುನಾಥ್‌ರವರು ಮಾತನಾಡಿ, ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ, ಬೆಂಗಳೂರು, ಕಲಬುರ್ಗಿ ವಿಶ್ವವಿದ್ಯಾನಿಲಯಗಳು ಪರೀಕ್ಷೆ ನಡೆಸಲು ಮುಂದಾಗಿವೆ. ವಿಶ್ವವಿದ್ಯಾನಿಲಯಗಳು ನಡೆಸುವ ಪರೀಕ್ಷೆಗಳಿಂದ ಯಾವುದೇ ಭಾಗದ ವಿದ್ಯಾರ್ಥಿಗಳಿಗೆ ತೊಂದರೆಯಾಗಿಲ್ಲ. ಈ ಸಂಬಂಧ ಅಂಕಿ ಅಂಶಗಳ ಸಮೇತ ಉನ್ನತ ಶಿಕ್ಷಣ ಇಲಾಖೆಗೆ ಮಾಹಿತಿ ನೀಡುವಂತೆ ಕೋರಿದರು.

ಮಾನ್ಯ ಕುಲಪತಿಯವರು ಮಾತನಾಡಿ, ದಿನಾಂಕ 08-02-2024 ರಂದು ಉನ್ನತ ಶಿಕ್ಷಣ ಇಲಾಖೆಯು ಏರ್ಪಾಡಿಸಿರುವ ಸಭೆಯಲ್ಲಿ ಈ ವಿಷಯವನ್ನು ಸಹ ಪ್ರಸ್ತಾಪಿಸುವುದಾಗಿ ತಿಳಿಸಿದರು.

ಅಂತಿಮವಾಗಿ ಕುಲಸಚಿವರು ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕರಿಸಿದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

| | |
|---|---|
| ಸಹಿ/- | ಸಹಿ/- |
| **ಸದಸ್ಯ ಕಾರ್ಯದರ್ಶಿ ಹಾಗೂ ಕುಲಸಚಿವರು** | **ಅಧ್ಯಕ್ಷರು ಹಾಗೂ ಕುಲಪತಿಗಳು** |